ಸಂಪುಟ : 8 ಸಂಚಿಕೆ : 238 ಪುಟ : 4 ಬೆಲೆ : 3.00 ಶನಿವಾರ ಅಕ್ಟೋಬರ್ 28, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 238 Pages : 4 Price : 3.00 Saturday October 28, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ದಿ.28-10-2023ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ:** ವಾರ್ಡ್ ನಂ. 1 ಎಸ್ ಎಂ ಕೃಷ್ಣ ನಗರ ಮೇಲಿನ ಭಾಗ ಕೆಳಗಿನ ಭಾಗ. ವಾರ್ಡ್ ನಂ. 15,16,17 ಶಹಪೂರಪೇಟೆ, ಡಿಸಿ ಮಿಲ್ ರೋಡ್, ಜವಳಗಲ್ಲಿ, ಕಾಡಪ್ಪನವರ ಲೈನ್, ಗಡಾದವರ ಲೈನ್, ತಡಸದರ ಲೈನ್, ಕಟ್ಟಿ ಬಸವೇಶ್ವರ ಲೈನ್, ನವಗ್ರಹ ಗುಡಿ ಲೈನ್, ಪಿಳ್ಳಿಯವರ ಲೈನ್, ಗಣಪತಿ ಗುಡಿ ಹಿಂದೆ- ಮುಂದೆ, ಕರ್ನಾಟಕ ಟಾಕೀಸ್ ಲೈನ್, ಮಸೂತಿ ಹಿಂದೆ, ಬಿಜಾಪುರದವರ ಲೈನ್, ನಾಗಪ್ಪನ ಕಟ್ಟಿ, ಎಲ್ಲಮ್ಮನ ಗುಡಿ ಲೈನ್, ಪ್ರಕಾಶ್ ಸ್ಟೋರ್ ಸಂದಿ, ವಕೀಲರ ಲೈನ್ ಉಳಿದ ಭಾಗಗಳು.

ವಾರ್ಡ್ ನಂ. 30- 76 ಪ್ಲಾಟ್ ಕೊರವರ ಓಣಿ, ವಾರ್ಡ್ ನಂ. 24, 26 ಅಬ್ಬಿಗೇರಿ ಕಾಂಪೌಂಡ್ ಲೈನ್, ಸಾಲಮನೆ ಲೈನ್, ಹಳೆ ಡಿಸಿ ಆಫೀಸ್ ಲೈನ್, ಉಡಚಮ್ಮನ ಗುಡಿ ಲೈನ್, ಕಮ್ಮಾರ ಸಾಲ ಲೈನ್, ಮಕಾನಗಲ್ಲಿ, ವಾರ್ಡ್ ನಂ. 22 ಗಿರಣಿ ಲೈನ್, ಈಶ್ವರ ಗುಡಿ ಲೈನ್, ಧಾರವಾಡದವರ ಲೈನ್, ಶಿವಪ್ಪನವರ ಲೈನ್, ದಖನಿಯವರ ಲೈನ್.

ವಾರ್ಡ್ ನಂ. 21, 22, 23 ಈಟಿಯಾರ ಲೈನ್, ಭಾಗ1,2,3,4, ಅಂಗನವಾಡಿ ಲೈನ್, ಶಾಂತವ್ವನ ಅಡ್ಡೆದ ಲೈನ್, ಜಂತ್ಲಿಯವರ ಹಳೆ ಲೈನ್-ಹೊಸ ಲೈನ್, ದ್ಯಾಮಪ್ಪನ ಕಟ್ಟಿ, ಕುಂಬಾರ ಓಣಿ, ವಿಭೂತಿ ಓಣಿ, ಹನುಮಾನ ಗರಡಿ ಲೈನ್, ದ್ರೌಪದಿ ಬಾವಿ ಲೈನ್ ಕೆಲವು ಉಳಿದ ಭಾಗಗಳು, ವಾರ್ಡ್ ನಂ. 27 ಸಂಕಣ್ಣವರ ಲೇಔಟ್, ಪೋಲೀಸ್ ಕ್ವಾರ್ಟರ್ಸ್, ವಾರ್ಡ್ ನಂ. 6, 5 ಅರವಿಯವರ ಲೈನ್, ಕೋನಾಪುರ ಲೈನ್, ಶಿವನಾಗ ನಗರ ಭಾಗ-1,2,3,4, ಚೆನ್ನಪ್ಪ ಗೌಡ್ರು ಲೈನ್, ಹಳ್ಳಿಕೇರಿ ಪ್ಲಾಟ್, ಗಣೇಶನಗರ ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಲು ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರು ವಿನಂತಿಸಿದ್ದಾರೆ.

### ಮೀಸಲಾತಿಗಾಗಿ ಆಗ್ರಹಿಸಿ 'ಲಿಂಗಪೂಜೆ'ಯ ಪೂರ್ವಭಾವಿ ಸಭೆಯಲ್ಲಿ ಬಸವಜಯ ಮೃತ್ಯುಂಜಯ ಸ್ವಾಮೀಜಿ

## ನಾವು ಮತ್ತೊಬ್ಬರ ಹಕ್ಕು ಕಸಿಯಲು ಹೋರಾಡುತ್ತಿಲ್ಲ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡುವಂತೆ ಆಗ್ರಹಿಸಿ ಆರಂಭಿಸಿರುವ ಹೋರಾಟ ಮೀಸಲಾತಿಯನ್ನು ಪಡೆಯುವರೆಗೂ ನಿಲ್ಲಿಸುವದಿಲ್ಲ ಎಂದು ಕೂಡಲಸಂಗಮದ ಪಂಚಮಸಾಲಿ ಗುರುಪೀಠಾಧ್ಯಕ್ಷರಾದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಈ ಕುರಿತು ಲಕ್ಷ್ಮೇಶ್ವರದ ಬಸವರಾಜ ಉಮಚಗಿ ಅವರ ನಿವಾಸದಲ್ಲಿ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗಾಗಿ ಆಗ್ರಹಿಸಿ ಗದಗ ಜಿಲ್ಲೆಯ ಅಸುಂಡಿ ಕ್ರಾಸ್‌ನಲ್ಲಿ ಅ.30ರಂದು ನಡೆಯಲಿರುವ ಲಿಂಗಪೂಜೆಯ ಪೂರ್ವಭಾವಿ ಸಭೆಯ ನಿಮಿತ್ತ ಶುಕ್ರವಾರ ಕರೆದಿದ್ದ ಪತ್ರಿಕಾಗೋಷ್ಠಿ ಉದ್ದೇಶಿಸಿ ಅವರು ಮಾತನಾಡಿದರು.

ಸರ್ಕಾರದ ಯಾವುದೇ ಇರಲಿ, ಕೊನೆಗೆ ನಮ್ಮ ಸಮುದಾಯವರೇ ಸಿಎಂ ಆದರೂ ಸಹ ನ್ಯಾಯಸಮ್ಮತವಾಗಿರುವ ಬೇಡಿಕೆಯಿಂದ ಹಿಂದೆ ಸರಿಯುವದಿಲ್ಲ.



ಸಿದ್ದರಾಮಯ್ಯ ಅವರು ಸಿಎಂ ಆಗಿ ಅಧಿಕಾರ ಸ್ವೀಕರಿಸಿದ ಬಳಿಕ ಭೇಟಿಯಾಗಿ ಮೀಸಲಾತಿ ಕುರಿತು ಮಾತನಾಡಿದಾಗ ಬಜೆಟ್ ಅಧಿವೇಶನದವರೆಗೆ ಸಮಯ ನೀಡಿ ಎಂದಿದ್ದರು. ಆದರೆ ಬಜೆಟ್ ಅಧಿವೇಶನ ಮುಗಿದು ನಾಲ್ಕು ತಿಂಗಳಾದರೂ ಕೂಡ ಅವರು ನಮ್ಮ ಬೇಡಿಕೆಯತ್ತ ಗಮನ ಹರಿಸುತ್ತಿಲ್ಲ. ಅವರನ್ನು ಮತ್ತೆ ಭೇಟಿಯಾದರೆ ದೀಪಾವಳಿ, ಸಂಕ್ರಾಂತಿ ಇಲ್ಲವೇ ಲೋಕಸಭಾ ಚುನಾವಣೆ ಮುಗಿಯಲಿ ಎನ್ನಬಹುದು. ಲೋಕಸಭಾ ಚುನಾವಣೆ ಗೆಲ್ಲಬೇಕು ಎಂದು ಎರಡೂ ರಾಷ್ಟ್ರೀಯ ಪಕ್ಷಗಳಿಗೆ ಹಠವಿದೆ. ಹೀಗಾಗಿ ಲೋಕಸಭಾ ಚುನಾವಣೆ ಒಳಗೆ ನ್ಯಾಯಸಮ್ಮತವಾದ 2ಎ ಮೀಸಲಾತಿಯನ್ನು ಪಂಚಮಸಾಲಿ ಸಮಾಜಕ್ಕೆ ನೀಡಲು ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸೋಣ ಎಂದರು. ಡಿ.4ರಿಂದ 15ರವರೆಗೆ ಸುವರ್ಣಸೌಧದಲ್ಲಿ ಅಧಿವೇಶನ ನಡೆಯಲಿದೆ. ಅಧಿವೇಶನ ಆರಂಭವಾಗುವದರೊಳಗೆ ನಮ್ಮ ಬೇಡಿಕೆ ಈಡೇರಿಸಬೇಕು ಎಂದು ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಲಿಂಗಪೂಜೆ ಮಾಡುವ ಮೂಲಕ ಸರ್ಕಾರಕ್ಕೆ ಒತ್ತಾಯಿಸೋಣ. ರಾಜ್ಯದಲ್ಲಿ 2ಎ ಹಾಗೂ ಕೇಂದ್ರದಲ್ಲಿ ಒಬಿಸಿಗೆ ಸೇರಿಸುವಂತೆ ಒತ್ತಾಯಿಸುತ್ತಿದ್ದೇವೆ ಹೊರತು ನಾವು ಯಾರ ವಿರುದ್ಧ ಅಥವಾ ಮತ್ತೊಬ್ಬರ ಹಕ್ಕನ್ನು ಕಸಿದುಕೊಳ್ಳಲು ಹೋರಾಟವನ್ನು ನಡೆಸುತ್ತಿಲ್ಲ. ರಾಜ್ಯ ಸರ್ಕಾರದಲ್ಲಿ ಇಬ್ಬರು ಮಂತ್ರಿಗಳು ಸೇರಿ 11 ಜನ ಶಾಸಕರು ವಿಧಾನಸಭೆಯಲ್ಲಿ ಗುಡುಗಿದರೆ ನಮ್ಮ ಬೇಡಿಕೆ ನೂರಕ್ಕೆ ನೂರರಷ್ಟು ಈಡೇರಲಿದೆ ಎನ್ನುವ ವಿಶ್ವಾಸವಿದೆ ಎಂದರು.

'ಲಿಂಗಾಯತ ಜಾತಿಗಳಿಗೆ ಮೀಸಲಾತಿ ಸಿಗುವುದು ಅಸಾಧ್ಯ. ಆದರೂ ಮಠಾಧೀಶರು ಮತ್ತು ಸಂಸ್ಥೆಗಳು ಮೀಸಲಾತಿ ಹೋರಾಟಕ್ಕೆ ಇಳಿದಿರುವುದು ಕೇವಲ ರಾಜಕೀಯ ಸ್ಟಂಟ್ ಆಗಿದೆ' ಎಂದು ಜಾಗತಿಕ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಮಹಾಪ್ರಧಾನ ಕಾರ್ಯದರ್ಶಿ ಎಸ್.ಎಂ ಜಾಮದಾರ ಅವರು ಗದಗ ನಗರದಲ್ಲಿ ನಡೆದ ಸಮಾರಂಭದಲ್ಲಿ ಹೇಳಿದ್ದಾರಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ಶ್ರೀಗಳು, 'ಜಾಮದಾರ ಅವರು ಹಿಂದಿನ ಆಯೋಗಗಳ ಕುರಿತು ಹೇಳಿದ್ದಾರೆ. ಅವರಿಗೆ ಈಗಿನ ಲಿಂಗಾಯತ ಧರ್ಮದ ವಿದ್ಯಾರ್ಥಿಗಳು ಉದ್ಯೋಗ ಮತ್ತು ಶಿಕ್ಷಣದಿಂದ ವಂಚಿತರಾಗುತ್ತಿರುವುದು ತಿಳಿದಿಲ್ಲ ಎಂದರು. ಈ ಸಂದರ್ಭದಲ್ಲಿ ಈಶ್ವರಪ್ಪ ಉಮಚಗಿ, ರುದ್ರಪ್ಪ ಉಮಚಗಿ, ಪ್ರಕಾಶ ಮೆಣಸಿನಕಾಯಿ, ಬಸವರಾಜ ಪರಪ್ಪ ಉಮಚಗಿ ಮತ್ತಿತರರು ಇದ್ದರು.

> ಈಗ ಗುರುಗಳಾದವರೇ ಮೀಸಲಾತಿ ಕೇಳುತ್ತಿದ್ದಾರೆ. ಹೀಗಾಗಿ ನ್ಯಾಯಸಮ್ಮತವಾಗಿ ನಾವು ಮೀಸಲಾತಿ ಕೇಳುವುದರಲ್ಲಿ ತಪ್ಪಿಲ್ಲ. ಈಗಿನ ಕಾಲದಲ್ಲಿ ಮೀಸಲಾತಿ ಅನಿವಾರ್ಯವಾಗಿದೆ. ಈ ವಿಚಾರವೂ ಕೂಡ ಜಾಮದಾರ ಅವರಿಗೆ ಗೊತ್ತಿಲ್ಲವೆಂದು ಅನ್ನಿಸುತ್ತದೆ. 20ನೇ ಶತಮಾನದಲ್ಲಿ ಲಿಂಗಾಯತರು ಬಡವರಾಗಿದ್ದಾರೆ. ಈ ಕಾರಣಕ್ಕಾಗಿ ಮೀಸಲಾತಿ ಕೇಳುತ್ತಿದ್ದೇವೆ. ಜಾಮದಾರ ಅವರು ಸಾಧ್ಯವಾದರೆ ಈ ಹೋರಾಟಕ್ಕೆ ಬೆಂಬಲ ಕೊಡಲಿ. ಇಲ್ಲವೆ ಮೌನವಾಗಿರಲಿ ಎಂದು ಶ್ರೀಗಳು ಸೂಚ್ಯವಾಗಿ ಹೇಳಿದರು.

## ಉದ್ಯಾನದಲ್ಲಿ ಉದಯರಾಗ, ಸಂಧ್ಯಾರಾಗ ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ

ಉದ್ಯಾನವನದಲ್ಲಿ ಉದಯರಾಗ ಹಾಗೂ ಸಂಧ್ಯಾರಾಗ ಕಾರ್ಯಕ್ರಮ ದಿ.29.10.2023 ರವಿವಾರ ದಂದು ಜರುಗಲಿದೆ.

ಬೆಳಿಗ್ಗೆ:6.30 ರಿಂದ 7.30 ರವರೆಗೆ ನಡೆಯುವ ಉದಯರಾಗ ಕಾರ್ಯಕ್ರಮದಲ್ಲಿ ರಾಜೀವಗಾಂಧಿ ನಗರದ ಶಿವಶರಣ ಹರಳಯ್ಯ ಉದ್ಯಾನವನದಲ್ಲಿ ಶ್ರೀ ಶರಣಬಸವ ಪುಲಾರಿ ಅವರಿಂದ "ವಚನ ಸಂಗೀತ" ವಿಶ್ವೇಶ್ವರಯ್ಯ ನಗರದ ವಿಶ್ವೇಶ್ವರಯ್ಯ ಉದ್ಯಾನವನದಲ್ಲಿ ಪುಟ್ಟರಾಜ ಕಲಾತಂಡ, ಅಸುಂಡಿ ಇವರಿಂದ "ಸುಗಮ ಸಂಗೀತ" ಹಾಗೂ ಸಾಯಂಕಾಲ: 5.30 ರಿಂದ 6.30 ಗಂಟೆಯ ವರೆಗೆ ಭೀಷ್ಮಕೆರೆಯ ಬಸವೇಶ್ವರ ಪುತ್ಥಳಿ ಆವರಣದಲ್ಲಿ ನಡೆಯುವ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ಕು.ನಿವೇದಿತಾ ಎಚ್ ಇವರಿಂದ "ಸುಗಮ ಸಂಗೀತ" ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನರಗುಂದ ಪುರಸಭೆ ವ್ಯಾಪ್ತಿಯ ಸಾರ್ವಜನಿಕರ ಗಮನಕ್ಕೆ

■ವಿಜಯಸಾಕ್ಷಿ ಸುದ್ದಿ, ನರಗುಂದ

ನರಗುಂದ ಪುರಸಭೆ ವ್ಯಾಪ್ತಿಯಲ್ಲಿ ಬರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ರಾಷ್ಟ್ರೀಯ ನಗರ ಜೀವನೋಪಾಯ ರಾಜ್ಯ ಅಭಿಯಾನ ಯೋಜನೆಯಡಿ ವಿವಿಧ ಉಪಘಟಕದಡಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸ್ವಯಂ ಉದ್ಯೋಗ ಕಾರ್ಯಕ್ರಮಕ್ಕೆ ಬಡ್ಡಿ ಸಹಾಯಧನ, ಸ್ವ ಸಹಾಯ ಗುಂಪುಗಳ ರಚನೆ ಹಾಗೂ ಬ್ಯಾಂಕ್ ಲಿಂಕೇಜ್‌ಗೆ ಗುರಿ ನಿಗದಿಪಡಿಸಿದ್ದು, 18 ರಿಂದ 45 ವರ್ಷ ವಯೋಮಿತಿಯುಳ್ಳ ಆಸಕ್ತರು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಅರ್ಜಿಗಳನ್ನು ಸಲ್ಲಿಸಲು ದಿ. 15-11-2023 ಕೊನೆಯ ದಿನವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಪುರಸಭೆ ಡೇ-ನಲ್ಮ ವಿಭಾಗದಲ್ಲಿ ಪಡೆಯಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

### ಕರ್ನಾಟಕ ಸಂಭ್ರಮ-50- ಅಲ್ಪಸಂಖ್ಯಾತ ಸಂಘಟನೆಗಳ ಸಭೆಯಲ್ಲಿ ಡಿಸಿ ಕರೆ

## ಕನ್ನಡದ ಹಬ್ಬಕ್ಕೆ ಕೈ ಜೋಡಿಸಿ



■ವಿಜಯಸಾಕ್ಷಿ ಸುದ್ದಿ, ಗದಗ

ಮೈಸೂರು ರಾಜ್ಯಕ್ಕೆ ಕರ್ನಾಟಕ ನಾಮಕರಣವಾಗಿ 50 ವರ್ಷಗಳು ಗತಿಸಿರುವ ಹಿನ್ನಲೆಯಲ್ಲಿ ಇದೇ ನವೆಂಬರ್ 2 ರಿಂದ ರಾಜ್ಯಾದ್ಯಂತ ಕರ್ನಾಟಕ ಸಂಭ್ರಮ-50 ವರ್ಷಾಚರಣೆ ನಡೆಸಲಾಗುತ್ತಿದೆ.

ಗದಗನಲ್ಲಿ ನವೆಂಬರ್ 3 ರಂದು ಅರ್ಥಪೂರ್ಣ ಹಾಗೂ ಅದ್ದೂರಿಯಾಗಿ ಸಂಭ್ರಮಾಚರಣೆ ಆಯೋಜಿಸಲಾಗುತ್ತಿದ್ದು, ಅಲ್ಪಸಂಖ್ಯಾತ ಸಂಘಟನೆಗಳ ಸಹಭಾಗಿತ್ವದಲ್ಲಿ ಕನ್ನಡಿಗರ ಒಮ್ಮತದ ಹಬ್ಬವಾಗಿ ಕರ್ನಾಟಕ ಸಂಭ್ರಮ-50 ಯಶಸ್ವಿಗೊಳಿಸುವಂತೆ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಕೋರಿದರು.

ನಗರದ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಕರ್ನಾಟಕ ಸಂಭ್ರಮ-50ರ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಜರುಗಿದ ಜಿಲ್ಲೆಯ ಅಲ್ಪಸಂಖ್ಯಾತ ಸಂಘಟನೆಗಳ ಪದಾಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕರ್ನಾಟಕ ಸಂಭ್ರಮ-50 ಕನ್ನಡದ ಹಬ್ಬವಾಗಿ ವಿಜೃಂಬಣೆಯಿಂದ ಆಚರಿಸೋಣ, ಎಲ್ಲ ಸಂಘಟನೆಗಳು ಈ ಹಬ್ಬದಲ್ಲಿ ಪಾಲ್ಗೊಳ್ಳುವಿಕೆ ಅಗತ್ಯವಾಗಿದೆ ಎಂದರು.

1973ರಲ್ಲಿ ಜರುಗಿದ ಸಮಾರಂಭ ಹಾಗೂ ಮೆರವಣಿಗೆಯಂತೆಯೇ ನವೆಂಬರ್ 3 ರಂದು ಸಹ ಆ ಗತವೈಭವವನ್ನು ಮರುಕಳಿಸುವ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಾರ್ಯಕ್ರಮ ಯಶಸ್ವಿಗೆ ತಮ್ಮೆಲ್ಲರ ಸಹಾಯ, ಸಹಕಾರ ನೀಡಬೇಕೆಂದು ಕೋರಿದರು. ಮೆರವಣಿಗೆ ನಡೆಯುವ ಬೀದಿಯುದ್ದಕ್ಕೂ ದೀಪಾಲಂಕಾರ, ಪ್ರಮುಖ ವೃತ್ತಗಳಲ್ಲಿ ಸರ್ಕಾರಿ ಕಟ್ಟಡಗಳಲ್ಲಿ ದೀಪಾಲಂಕಾರ ಮಾಡಲಾಗುತ್ತಿದೆ. ಎಲ್ಲ ಅಲಂಕಾರಗಳು ಸಹ ಕನ್ನಡಮಯ ವಾತಾವರಣವನ್ನು ಇಮ್ಮಡಿಗೊಳಸುವಂತೆ ಈಗಾಗಲೇ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಮೆರವಣಿಗೆಯಲ್ಲಿ ಸ್ಥಳೀಯ ಹಾಗೂ ರಾಜ್ಯ ಮಟ್ಟದ ಕಲಾತಂಡಗಳು ಭಾಗವಹಿಸಲಿವೆ. ಜಿಲ್ಲೆಯ ಸಾರ್ವಜನಿಕರೆಲ್ಲರೂ ಸಹ ಈ ಹಬ್ಬವನ್ನು ಸಂಭ್ರಮದಿಂದ ಆಚರಿಸೋಣ ಎಂದರು.

ಸಭೆಯಲ್ಲಿ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಅಮಿತ ಬಿದರಿ, ವಕ್ಫ ಮಂಡಳಿ ಅಧ್ಯಕ್ಷರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಜರಿದ್ದರು.

> ನವೆಂಬರ್ 1ರಿಂದ 3ರವರೆಗೆ ಪ್ರತಿ ದಿನ ಸಂಜೆ ಕಾಟನ್ ಸೇಲ್ ಸೋಸೈಟಿ ಆವರಣದ ಬೃಹತ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ನವೆಂಬರ್ 1 ರಂದು ಸ್ಥಳೀಯ ಕಲಾವಿದರಿಂದ ನವೆಂಬರ್ 2 ಮತ್ತು 3 ರಂದು ಸ್ಥಳೀಯ ಹಾಗೂ ರಾಜ್ಯ ಮಟ್ಟದ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಮೂಡಿಬರಲಿವೆ.

## ಭಾವೈಕ್ಯತೆಯ ಉರುಸ್ ಆಚರಣೆ



■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಶಿರಹಟ್ಟಿ ಪಟ್ಟಣದಲ್ಲಿ ಕಳೆದ 2 ದಿನಗಳಿಂದ ನಡೆಯುತ್ತಿದ್ದ ಹಜರತ್ ಮೆಹಬೂಬ ಸುಬ್ಹಾನಿ ಉರುಸ್‌ಗೆ ಶುಕ್ರವಾರ ನಡೆದ ತವಾಫ್‌ಗೆ ಸಹಸ್ರಾರು ಸಂಖ್ಯೆಯಲ್ಲಿ ಹಿಂದೂ-ಮುಸ್ಲಿಂ ಭಕ್ತರು ಸಂಭ್ರಮದ ಉರುಸ್ ಆಚರಣೆ ಮಾಡಿದರು.

ಪಟ್ಟಣವು ಭಾವೈಕ್ಯತೆಯ ಪ್ರತೀಕವಾಗಿದ್ದರಿಂದ ಹೊರರಾಜ್ಯಗಳಿಂದ ಸಹಸ್ರಾರು ಭಕ್ತರನ್ನು ಹೊಂದಿದ ಕರ್ತೃ ಶ್ರೀ ಜ.ಫಕೀರೇಶ್ವರರ ಸಂಸ್ಥಾನಮಠ ಹಾಗೂ ಹಜರತ್ ಮೆಹಬೂಬ ಸುಬ್ಹಾನಿ ದರ್ಗಾ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ. ಹೀಗಾಗಿ ಎರಡೂ ಧಾರ್ಮಿಕ ಸ್ಥಳಗಳಿಗೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ.

ಉರುಸ್ ಪ್ರಯುಕ್ತ ಬುಧವಾರ ರಾತ್ರಿ ಗಂಧದ ಕಾರ್ಯಕ್ರಮದಲ್ಲಿ ಭಕ್ತರು ಅಹೋರಾತ್ರಿ ಪಾಲ್ಗೊಂಡಿದ್ದರು. ಕೆಳಗೇರಿ ಓಣಿಯ ದರ್ಗಾದಿಂದ ಪ್ರಾರಂಭವಾದ ಮೆರವಣಿಗೆಯು ಗುರುವಾರ ಬೆಳಗಿನ ಜಾವ ಮೆಹಬೂಬ ಸುಬಾನಿ ದರ್ಗಾದವರೆಗೆ ನಡೆಯಿತು. 2ನೇ ದಿನವಾದ ಗುರುವಾರವೂ ಉರುಸ್ ನಡೆಯಿತು. ಕೊನೆಯ ದಿನವಾದ ಶುಕ್ರವಾರ ವಿಶೇಷವಾಗಿ ಹಿಂದೂ ಭಕ್ತರು ತಮ್ಮ ಮನೆಯಿಂದ ದರ್ಗಾದವರಗೂ ದೀಡ ನಮಸ್ಕಾರ ಹಾಕುತ್ತಾರೆ. ಇನ್ನೂ ಕೆಲವರು ಸಂತಾನ ಪ್ರಾಪ್ತಿಗಾಗಿ ಹರಕೆಯನ್ನು ಹೊತ್ತು, ತಮ್ಮ ಬೇಡಿಕೆ ಈಡೇರಿದ ನಂತರ ತಮ್ಮ ಮಕ್ಕಳ ತೂಕದಷ್ಟು ಸಕ್ಕರೆ ಹಾಗೂ ಬೆಳ್ಳಿಯ ಕುದುರೆ ಅಥವಾ ಕಡಗಗಳನ್ನು ಕಾಣಿಕೆಯಾಗಿ ಸಮರ್ಪಿಸುತ್ತಾ ತಮ್ಮ ಭಕ್ತಿಯನ್ನು ಮೆರೆಯುತ್ತಾರೆ.

### ಯಾದಿಯಲ್ಲಿ 18 ವರ್ಷ ತುಂಬಿದವರ ಹೆಸರು ಇಲ್ಲದಿದ್ದರೆ ನಮೂನೆ ನಂ.6ರ ಮೂಲಕ ಅರ್ಜಿ ಸಲ್ಲಿಸಿ

## ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳ ಕರಡು ಮತದಾರರ ಯಾದಿ ಪ್ರಕಟ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಾದ 65-ಶಿರಹಟ್ಟಿ (ಪ.ಜಾ), 66-ಗದಗ, 67-ರೋಣ ಮತ್ತು 68-ನರಗುಂದ ನೇದ್ದವುಗಳಿಗೆ ಸಂಬಂಧಿಸಿದಂತೆ ಕರಡು ಮತದಾರರ ಯಾದಿಗಳನ್ನು ಜಿಲ್ಲಾಧಿಕಾರಿಗಳ ಕಚೇರಿ, ಉಪವಿಭಾಗಾಧಿಕಾರಿಗಳ ಕಚೇರಿ, ತಹಸೀಲ್ದಾರರ ಕಚೇರಿಗಳಲ್ಲಿ ಹಾಗೂ ಮುಖ್ಯ ಚುನಾವಣಾಧಿಕಾರಿಗಳ ವೆಬ್ ಸೈಟ್ www.ceokarnataka.kar.nic.in ನೇದ್ದರಲ್ಲಿ ದಿ: 27.10.2023 ರಂದು ಪ್ರಕಟಿಸಲಾಗಿದೆ.

ದಿನಾಂಕ: 01-01-2024ಕ್ಕೆ ಇರುವಂತೆ 18 ವರ್ಷ ವಯಸ್ಸು ಪೂರ್ಣಗೊಂಡಿರುವವರು ಮತದಾರರ ಯಾದಿಗಳಲ್ಲಿ ಹೆಸರು ಇಲ್ಲದವರು ಈ ಅವಧಿಯಲ್ಲಿ ತಮ್ಮ ಹೆಸರುಗಳನ್ನು ನಮೂನೆ ನಂ. 6 ರಲ್ಲಿ ಸಲ್ಲಿಸಬಹುದು ಹಾಗೂ 2024 ನೇ ವರ್ಷದ ಅರ್ಹತಾ ದಿನಾಂಕಗಳಾದ 1ನೇ ಏಪ್ರಿಲ್, 2024, 1ನೇ ಜುಲೈ, 2024 ಅಥವಾ 1ನೇ ಅಕ್ಟೋಬರ್, 2024 ನೇದ್ದಕ್ಕೆ 18 ವರ್ಷ ವಯಸ್ಸು ಪೂರ್ಣಗೊಳ್ಳುವವರು, ಕರಡು ಮತದಾರ ಪಟ್ಟಿ ಪ್ರಕಟಣೆ ದಿನಾಂಕದಿಂದ ನಮೂನೆ 6 ರಲ್ಲಿ ಸೇರ್ಪಡೆಗೊಳಿಸಲು ಅರ್ಜಿ ಸಲ್ಲಿಸಬಹುದು. ಇಂತಹ ಅರ್ಜಿಗಳನ್ನು ಆಯಾ ತ್ರೈಮಾಸಿಕಗಳಲ್ಲಿ ಅರ್ಹತೆಯನ್ನು ಪರಿಶೀಲಿಸಿ ನಿಯಮಾನುಸಾರ ನೋಂದಣಿ ಮಾಡಿಕೊಳ್ಳಲಾಗುವುದು.

ಮತದಾರ ಪಟ್ಟಿಯಲ್ಲಿ ಹೊಸದಾಗಿ ಹೆಸರನ್ನು ಸೇರ್ಪಡೆ ಮಾಡಲು ನಮೂನೆ 6 ರಲ್ಲಿ ಅರ್ಜಿ ಸಲ್ಲಿಸುವ ಅರ್ಜಿದಾರನು ಅರ್ಜಿಗೆ ಇತ್ತೀಚಿನ ಪಾಸ್‌ಪೋರ್ಟ್ ಸೈಜ್ ಪೋಟೋ ಹಾಗೂ ವಿಳಾಸದ ಬಗ್ಗೆ ದಾಖಲೆಗಳು ಹಾಗೂ ವಯಸ್ಸಿನ ಬಗ್ಗೆ ದಾಖಲೆಗಳನ್ನು ನೀಡಲು ತಿಳಿಸಲಾಗಿದೆ.

ಮತದಾರರ ಪಟ್ಟಿಯಿಂದ ಹೆಸರನ್ನು ತೆಗೆದುಹಾಕುವ ಸಲುವಾಗಿ ನಮೂನೆ 7 ರಲ್ಲಿ ಅರ್ಜಿ ಸಲ್ಲಿಸುವುದು. ಮತದಾರರ ನಿವಾಸ ಬದಲಾವಣೆಯಿದ್ದಲ್ಲಿ (ಮತದಾರ ಪಟ್ಟಿಯ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಸ್ಥಳಾಂತರವಾಗಿದ್ದಲ್ಲಿ), ಪ್ರಸ್ತುತ ಮತದಾರರ ಪಟ್ಟಿಯಲ್ಲಿರುವ ನಮೂದುಗಳ ಸರಿಪಡಿಸಬೇಕಾಗಿದ್ದಲ್ಲಿ, ಯಾವುದೇ ತಿದ್ದುಪಡಿಗಳಿಲ್ಲದೆ ಬದಲಿ ಮತದಾರರ ಗುರುತಿನ ಚೀಟಿ (ಎಪಿಕ್) ಅವಶ್ಯಕತೆ ಇದ್ದಲ್ಲಿ ಅಥವಾ ಅಂಗವಿಕಲ ವ್ಯಕ್ತಿ ಎಂದು ಗುರುತಿಸುವುದಕ್ಕೆ ಮನವಿ ಸಲ್ಲಿಸಬೇಕಾಗಿದ್ದಲ್ಲಿ ನಮೂನೆ 8 ರಲ್ಲಿ ಮೇಲ್ಕಾಣಿಸಿದ ಅವಧಿಯಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಕರಡು ಮತದಾರ ಪಟ್ಟಿಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು VHA Mobile App ಮುಖಾಂತರ ಅಥವಾ www.nvsp.in ರ ಮುಖಾಂತರ ಅಥವಾ ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಮತಗಟ್ಟೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮತಗಟ್ಟೆ ಮಟ್ಟದ ಅಧಿಕಾರಿಗಳು BLO ), ಉಪವಿಭಾಗಾಧಿಕಾರಿಗಳ ಕಾರ್ಯಾಲಯ (ERO), , ಸಂಬಂಧಪಟ್ಟ ತಹಸೀಲ್ದಾರರ ಕಾರ್ಯಾಲಯಗಳಲ್ಲಿ (AERO) ದಿನಾಂಕ: 27.10.2023 (ಶುಕ್ರವಾರ) ದಿಂದ 09.12.2023 (ಶನಿವಾರ) ದವರೆಗೆ ಸ್ವೀಕರಿಸಲಾಗುವುದು.

ಸದರಿ ದಿನಾಂಕಗಳಂದು ಸ್ವೀಕೃತವಾಗುವ ಹಕ್ಕು ಮತ್ತು ಆಕ್ಷೇಪಣೆಗಳನ್ನು ನಿಯಮಾನುಸಾರ ವಿಲೇವಾರಿ ಮಾಡಿ ಚುನಾವಣಾ ಆಯೋಗದ ನಿರ್ದೇಶನದಂತೆ ದಿನಾಂಕ: 05.01.2024 ರಂದು ಅಂತಿಮ ಮತದಾರ ಪಟ್ಟಿಗಳನ್ನು ಪ್ರಕಟಿಸಲಾಗುವುದು.

ಕರಡು ಪಟ್ಟಿ ಪ್ರಕಟಣೆ ಪೂರ್ವದಲ್ಲಿ ಜಿಲ್ಲೆಯಲ್ಲಿ ಒಟ್ಟು 959 ಮತಗಟ್ಟೆಗಳು ಇದ್ದು, ಮತಗಟ್ಟೆಗಳ ಪುನರ್ ವಿಂಗಡಣೆ ಕಾರ್ಯದ ನಂತರ 1500 ಮತದಾರರಕ್ಕಿಂತ ಹೆಚ್ಚು ಮತದಾರರು ಇದ್ದ ಮತಗಟ್ಟೆಗಳನ್ನು ವಿಭಾಗಿಸಿ ಹೆಚ್ಚುವರಿಯಾಗಿ 04 ಮತಗಟ್ಟೆಗಳನ್ನು ಹಾಗೂ 2 ಕಿ.ಮೀ ಕ್ಕಿಂತ ಹೆಚ್ಚು ದೂರವಿದ್ದ ಸ್ಥಳದಲ್ಲಿ ಹೆಚ್ಚುವರಿಯಾಗಿ ಒಂದು ಮತಗಟ್ಟೆಯನ್ನು ಸ್ಥಾಪಿಸಲಾಗಿದೆ.

ಜಿಲ್ಲೆಯಲ್ಲಿ ಒಟ್ಟು 4,38,062 ಪುರುಷ ಮತದಾರರು, 4,36,835 ಮಹಿಳಾ ಮತದಾರರು ಹಾಗೂ 58 ಇತರೆ ಮತದಾರರು ಹೀಗೆ ಒಟ್ಟು 8,74,955 ಮತದಾರರು ಕರಡು ಮತದಾರರ ಪಟ್ಟಿಯಲ್ಲಿ ಇರುತ್ತಾರೆ. ಜಿಲ್ಲೆಯ ಒಟ್ಟು ಮತದಾರರ ಪೈಕಿ 24383 ಯುವ ಮತದಾರರು ಸೇರ್ಪಡೆಯಾಗಿರುತ್ತಾರೆ.

ಈ ಪೈಕಿ 12859 ಪುರುಷ ಹಾಗೂ 11521 ಮಹಿಳಾ ಮತದಾರರಿರುತ್ತಾರೆ. ಪ್ರಸ್ತುತ ಕರಡು ಮತದಾರ ಪಟ್ಟಿಯಲ್ಲಿ 11388 ವಿಶೇಷ ಚೇತನ ಮತದಾರರಿದ್ದು, ಈ ಪೈಕಿ 6734 ಪುರುಷ ಹಾಗೂ 4654 ಮಹಿಳಾ ವಿಶೇಷ ಚೇತನ ಮತದಾರಿರುತ್ತಾರೆ. ಮತದಾರ ಪಟ್ಟಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣೆಯ

ಪೂರ್ವಾವಧಿಯಲ್ಲಿ ಒಟ್ಟು 4037 ಮತದಾರರ ಹೆಸರನ್ನು ಕೈಬಿಡಲಾಗಿದೆ ಹಾಗೂ 11037 ಮತದಾರರ ಹೆಸರನ್ನು ಮತದಾರ ಪಟ್ಟಿಗೆ ಸೇರ್ಪಡೆ ಮಾಡಲಾಗಿರುತ್ತದೆ. ಜಿಲ್ಲೆಯಲ್ಲಿ ಪ್ರಸ್ತುತ ಕರಡು ಮತದಾರ ಪಟ್ಟಿಯಲ್ಲಿ ಒಟ್ಟು 997 ಲಿಂಗಾನುಪಾತವಿರುತ್ತದೆ. ಈ ಪೈಕಿ 65-ಶಿರಹಟ್ಟಿ ವಿಧಾನಸಭಾ ಕ್ಷೇತ್ರದಲ್ಲಿ 993, 66-ಗದಗ ವಿಧಾನಸಭಾ ಕ್ಷೇತ್ರದಲ್ಲಿ 1020, 67-ರೋಣ ವಿಧಾನಸಭಾ ಕ್ಷೇತ್ರದಲ್ಲಿ 999 ಹಾಗೂ 68-ನರಗುಂದ ವಿಧಾನಸಭಾ ಕ್ಷೇತ್ರದಲ್ಲಿ 974 ಲಿಂಗಾನುಪಾತವಿರುತ್ತದೆ. 1509 ಪುರುಷ, 36 ಮಹಿಳಾ ಹೀಗೆ ಒಟ್ಟು 1545 ಸೇವಾ ಮತದಾರರ ಹೆಸರು ಸೇರ್ಪಡೆಗೊಂಡಿರುತ್ತಾರೆ ಎಂದು ಜಿಲ್ಲಾಧಿಕಾರಿ ವೈಶಾಲಿ. ಎಂ.ಎಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರದಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರ ಅಧ್ಯಕ್ಷತೆಯಲ್ಲಿ ನೋಂದಾಯಿತ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆ ಜರುಗಿಸಿ ಕರಡು ಮತದಾರರ ಪಟ್ಟಿಯನ್ನು ವಿತರಿಸಿದರು.

## ಸಾಕ್ಷಿ ಸುಭಾಷಿತ

ದೇವರ ನುಡಿಯನ್ನು ನಿಮ್ಮ ಕಿವಿಯಿಂದಲ್ಲ
ಹೃದಯದಿಂದ ಕೇಳಿಸಿಕೊಳ್ಳಿ

–ಸುಭಾಷಿತ

## ಸಂಪಾದಕೀಯ

# ಕಾಲೇಜುಗಳ ಅಭಿವೃದ್ಧಿಗೂ ಸಾಲ?

ರಾಜ್ಯದ 72 ಕಾಲೇಜುಗಳ ಅಭಿವೃದ್ಧಿಗೆ ವಿಶ್ವ ಬ್ಯಾಂಕ್‌ನಿಂದ 1500 ಕೋಟಿ ರೂಪಾಯಿ ಸಾಲ ಪಡೆಯಲು ರಾಜ್ಯ ಸರ್ಕಾರ ಮುಂದಾಗಿರುವುದು, ಸರಕಾರ ಆರ್ಥಿಕವಾಗಿ ಸಬಲವಾಗಿಲ್ಲ ಎನ್ನುವುದಕ್ಕೆ ಸಾಕ್ಷಿಯಾಗಿದೆ.

ಸೆಂಟರ್ ಫಾರ್ ಎಕ್ಸ್‌ಲೆನ್ಸ್ ಯೋಜನೆಯಡಿ ರಾಜ್ಯ ಸರಕಾರ ವಿಶ್ವಬ್ಯಾಂಕ್‌ನಿಂದ ಸಾಲ ತೆಗೆದುಕೊಳ್ಳಲು ಮುಂದಾಗಿದೆ. ಉನ್ನತ ಶಿಕ್ಷಣ ಇಲಾಖೆ ಅಡಿ ಬರುವ ಸರಕಾರಿ ಕಾಲೇಜುಗಳ ಅಭಿವೃದ್ಧಿಗೆ ಸಾಲದ ಹಣ ಬಳಕೆಯಾಗಲಿದೆ.

ರಾಜ್ಯದ ಪ್ರತಿ ಜಿಲ್ಲೆಯಿಂದ ಒಂದೊಂದು ಕಾಲೇಜಿನಂತೆ ಒಟ್ಟು 72 ಕಾಲೇಜುಗಳನ್ನು ಯೋಜನೆ ವ್ಯಾಪ್ತಿಗೆ ತರಲಾಗುವುದು ಎಂದು ಉನ್ನತ ಶಿಕ್ಷಣ ಇಲಾಖೆ ಸಚಿವ ಎಂ.ಪಿ. ಸುಧಾಕರ ಮಾಹಿತಿ ನೀಡಿದ್ದಾರೆ.

ಶೈಕ್ಷಣಿಕ ಪ್ರಗತಿಗೆ ರಾಜ್ಯ ಸರ್ಕಾರದ ಬಳಿ 1500 ಕೋಟಿ ರೂಪಾಯಿ ಸಹ ಕೊರತೆಯಾಗಿದೆಯೆಂದರೆ ರಾಜ್ಯದ ಬೊಕ್ಕಸ ಖಾಲಿಯಾಗಿದೆ ಅಂತ ಅರ್ಥೈಸಿಕೊಳ್ಳಬಹುದು.

ಸರಕಾರ ಯಾವುದಾದರೂ ಕೈಗಾರಿಕೆ ಸ್ಥಾಪನೆಗೆ ಸಾಲ ಮಾಡಲು ಮುಂದಾಗಿದ್ದರೆ, ಸಾಲ ತೀರಿಸುವ ಮಾರ್ಗ ಮತ್ತು ಯೋಜನೆಗಳು ಇಟ್ಟುಕೊಂಡಿರುತ್ತದೆ.

ಕಾಲೇಜುಗಳ ಅಭಿವೃದ್ಧಿಗೆ ವಿಶ್ವಬ್ಯಾಂಕ್‌ನಿಂದ ನೆರವು ಪಡೆಯುವುದರಿಂದ ಕಾಲೇಜುಗಳು ಎಲ್ಲ ರೀತಿಯಿಂದ ಅಭಿವೃದ್ಧಿ ಕಾಣುತ್ತವೆ. ಸರಕಾರಿ ಶಾಲೆಯಲ್ಲಿ ಓದಿದ ಮಕ್ಕಳಿಗೆ ಉತ್ತಮ ವಾತಾವರಣ, ಗುಣಮಟ್ಟದ ಶಿಕ್ಷಣ ದೊರೆಯಲಿದೆ. ಆದರೆ ಅದರ ಜೊತೆಗ ಸಾಲ ತೀರಿಸುವುದು ಹೇಗೆ ಎನ್ನುವ ಪ್ರಶ್ನೆಯೂ ಎದುರಾಗುತ್ತದೆ.

ಬಡ ವರ್ಗದ ಮಕ್ಕಳ ಕಲ್ಯಾಣಕ್ಕಾಗಿ ಸರಕಾರ ತೆಗೆದುಕೊಂಡ ನಿರ್ಧಾರ ಸರಿಯಾಗಿದೆ ಎನ್ನುವುದಾದರೆ, ಕೇವಲ ಜಿಲ್ಲೆಗೊಂದು ಕಾಲೇಜು ಅಭಿವೃದ್ಧಿ ಮಾಡುವುದರಿಂದ ಸರಕಾರದ ಉದ್ದೇಶ ಸಫಲವಾಗುವುದಿಲ್ಲ.

ರಾಜ್ಯ ಸರಕಾರ ಜಿಲ್ಲೆಗೊಂದು ಕಾಲೇಜು ಅಭಿವೃದ್ಧಿ ಮಾಡದಷ್ಟು ಅಶಕ್ತವಾಗಿದೆ ಎನ್ನುವುದು ಇದರಿಂದ ಸಾಬೀತಾಗುತ್ತದೆ. ಸರಕಾರ ಶಿಕ್ಷಣ ಮತ್ತು ಆರೋಗ್ಯ ವಲಯಕ್ಕೆ ಸಾಕಷ್ಟು ಪ್ರಾಧಾನ್ಯತೆ ಕೊಡಬೇಕು. ಆದರೆ ಸದ್ಯ ಸರಕಾರ ಶೈಕ್ಷಣಿಕ ವಲಯಕ್ಕೂ ಆರ್ಥಿಕ ಸಂಪನ್ಮೂಲ ಕೊರತೆ ಎದುರಿಸುತ್ತಿರುವುದು ಶುಭ ಸೂಚನೆ ಅಲ್ಲ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು.

# ಜಿಲ್ಲಾ ನೃತಕಲಾವಿದರ ಸಂಘ ಅಸ್ತಿತ್ವಕ್ಕೆ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಕೊಪ್ಪಳ ನಗರದಲ್ಲಿಗುರುವಾರ ನೃತ್ಯ ಕಲಾವಿದರ ಸಂಘದ ಸಭೆ ನಡೆಯಿತು. ಸಭೆಯಲ್ಲಿ ಕಲಾವಿದರ ವಿಷಯಕ್ಕೆ ಸಂಬಂಧಿಸಿದಂತೆ ವಿವಿಧ ವಿಷಯಗಳ ಕುರಿತುಚರ್ಚೆ ನಡೆಸಿ, ನೂತನ ಜಿಲ್ಲಾ ಘಟಕದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ರಾಮು ಪೂಜಾರ್(ಅಧ್ಯಕ್ಷ), ಕೆ. ರಮೇಶ್(ಉಪಾಧ್ಯಕ್ಷ), ಹರಿಪ್ರಸಾದ್ ಬಂಗಾರಿ(ಪ್ರಧಾನ ಕಾರ್ಯದರ್ಶಿ),

ಪಾಂಡು(ಖಜಾಂಚಿ) ಹಾಗೂ ಗೌರವ ಸಲಹೆಗಾರರಾಗಿ ಮಹೇಶ್ ಕಂದಾರಿ, ವಿಠ್ಠಲ್ ಹೊಳಿಯಪ್ಪನವರ್ ಅವರನ್ನು ನೇಮಿಸಲಾಗಿದೆ ಎಂದು ನೃತ್ಯ ಕಲಾವಿದರ ಸಂಘದ ಪ್ರಕಟಣೆ ತಿಳಿಸಿದೆ.


ಈ ಸಂದರ್ಭದಲ್ಲಿ ತರಬೇತಿದಾರರಾದ ಪ್ರತಾಪ್ ಬಡಿಗೇರ, ಶ್ರೀನಿವಾಸ್, ರಾಜುದೊಡ್ಡಮನಿ, ಮಂಜು ಹಲಗೇರಿ, ಸಲ್ಮಾನ್ ಕಿನ್ನಾಳ್, ರವಿಕುಮಾರ್, ಸಂಜು ಮರೀಶ್, ರಾಹುಲ್, ಮಲ್ಲು, ಪ್ರದೀಪ್, ಮಂಜು ನಾಯಕ್, ಚಂದ್ರು, ಗವಿ ಇತರರು ಉಪಸ್ಥಿತರಿದ್ದರು.



'ಮಹರ್ಷಿ ವಾಲ್ಮೀಕಿ ಜಯಂತಿ'ಯ ಪ್ರಯುಕ್ತ ಲೇಖನ

# ರಾಮಾಯಣ ಮಹಾಕಾವ್ಯದ ಸಂದೇಶಗಳು

ಮನಸ್ಸಿನಂತೆ ಮಾತು, ಮಾತಿನಂತೆ ಕ್ರಿಯೆ, ಹೀಗೆ ಮನಸ್ಸು, ಮಾತು, ಕ್ರಿಯೆಗಳಲ್ಲಿ ಒಂದೇ ರೀತಿಯ ಸಮನ್ವಯತೆ ಸಾಧಿಸಿದ್ದ ಸತ್ಪುರುಷರ, ಮಹಾನ್ ಸಾಧಕರ, ರಸ ಋಷಿಗಳ ಬೀಡು ಭಾರತವೆಂಬ ಪುಣ್ಯಭೂಮಿ. ಸಾಧು-ಸಂತರು, ದಾಸರು, ಶರಣರು ಅತ್ಯಮೂಲ್ಯವಾದ ಜೀವನದ ಮೌಲ್ಯಗಳನ್ನು ಇಡೀ ಜಗತ್ತಿಗೆ ಕೊಡುಗೆಯಾಗಿ ನೀಡಿ ಹೋಗಿದ್ದಾರೆ. ಅಂತಹ ಮಹಾಪುರುಷರನ್ನು ಸ್ಮರಿಸುವ ಮೂಲಕ ಅವರ ಸಂದೇಶಗಳನ್ನು, ಆದರ್ಶಗಳನ್ನು ಮೈಗೂಡಿಸಿಕೊಂಡು ಮನುಷ್ಯ ಜೀವನದ ಸಾರ್ಥಕತೆಯನ್ನು ಸಾಧಿಸಬೇಕಿದೆ.



ಪ್ರಪಂಚದ ಸಾಹಿತ್ಯ ಚರಿತ್ರೆಯಲ್ಲಿ ರಾಮಾಯಣಕ್ಕೆ ವಿಶೇಷ ಸ್ಥಾನವನ್ನು ಒದಗಿಸಿದ ಕೀರ್ತಿ ವಾಲ್ಮೀಕಿ ಮಹರ್ಷಿ ಅವರಿಗೆ ಸಲ್ಲುತ್ತದೆ. ವಾಲ್ಮೀಕಿಯು ಸರ್ವತೋಮುಖ ಚಿಂತಕ. ಬಹು ವೈವಿಧ್ಯಮಯವಾಗಿ 'ರಾಮಾಯಣ' ಎಂಬ ಮಹಾಕಾವ್ಯದ ರಚನಕಾರರಾಗಿ ಜೀವನದ ಶ್ರೇಷ್ಠ ಮೌಲ್ಯಗಳನ್ನು ಸರ್ವಕಾಲಕ್ಕೂ ಸಾರುವ ಮಹಾಕಾವ್ಯ ಅನೇಕ ಸಾಧಕರಿಗೆ ಮಾರ್ಗಸೂಚಿಯಾಗಿದೆ. ಸ್ವಾಮಿ ವಿವೇಕಾನಂದರೂ ಸೇರಿದಂತೆ ಅನೇಕ ಮಹನೀಯರಿಗೆ ರಾಮಾಯಣದ ಮೌಲ್ಯಗಳು ಸಾಧನೆ ಸಿದ್ಧಿಗೆ ದಾರಿದೀಪವಾಗಿವೆ.

ರಾಮಾಯಣದಲ್ಲಿ ಬರುವ ಒಂದೊಂದು ಸನ್ನಿವೇಶಗಳು ಓದುಗರ ವಿವೇಕ, ಬುದ್ಧಿ, ಮನಸ್ಸು, ಕ್ರಿಯೆ, ಕರ್ಮಗಳನ್ನು ಸರಿಯಾದ ದಾರಿಯಲ್ಲಿ ನಡೆಸುವ ಮಾರ್ಗದರ್ಶಿಯಂತಿದೆ. ಇಂತಹ ಪವಿತ್ರವಾದ ಹಾಗೂ ಶ್ರೇಷ್ಠವಾದ ಮಹಾಕಾವ್ಯವನ್ನು ರಚನೆಮಾಡಿದ ವಾಲ್ಮೀಕಿ ಮಹರ್ಷಿಯವರು ಪೂರ್ವಾಶ್ರಮದಲ್ಲಿ ಒಬ್ಬ ಬೇಟೆಗಾರ, ವಾಲ್ಮೀಕಿಯ ಮೂಲ ಹೆಸರು ರತ್ನಾಕರ. ತನ್ನ ಜೀವನವನ್ನು ನಡೆಸಲು ಅಸಮರ್ಥನಾಗಿ ಕಳ್ಳನಾಗಿ ಜನರನ್ನು ಪೀಡಿಸುತ್ತಿದ್ದಾಗ ಒಮ್ಮೆ ನಾರದ ಮಹರ್ಷಿಗಳು ಭೇಟಿಯಾದರು. ಆಗ ರತ್ನಾಕರನಿಗೆ 'ನಿನ್ನ ಪಾಪವನ್ನೆಲ್ಲಾ ನಿನ್ನ ಕುಟುಂಬದವರು ಹಂಚಿಕೊಳ್ಳುತ್ತಾರೋ ಹೋಗಿ ವಿಚಾರಿಸು' ಎಂದಾಗ ಕುಟುಂಬದಲ್ಲಿ ಯಾರೊಬ್ಬರೂ ರತ್ನಾಕರನ ಪಾಪವನ್ನು ಹಂಚಿಕೊಳ್ಳಲು ತಯಾರಿರಲಿಲ್ಲ.

ಇದರಿಂದ ವಿಚಲಿತನಾಗಿ ಬಂದು ನಾರದರಲ್ಲಿ ಪರಿಹಾರ ತಿಳಿಸಿ ಎಂದು ಕೇಳಿದಾಗ ನಾರದರು ರಾಮನಾಮವನ್ನು ನಿರಂತರವಾಗಿ ಜಪಿಸುತ್ತ ತಪಸ್ಸು ಮಾಡು ಎಂದು ಸೂಚಿಸಿದರಂತೆ. ಆಗ ರತ್ನಾಕರನು ನಿರಂತರ ತಪಸ್ಸು ಮಾಡುವಾಗ ಅವರ ಸುತ್ತ ಹುತ್ತ ಬೆಳೆಯಿತು. ಆಗ ನಾರದರು ಕಾಡಿನಲ್ಲಿ ಅದೇ ದಾರಿಯಲ್ಲಿ ಸಾಗುತ್ತಿರಲು ರತ್ನಾಕರನ ಭಕ್ತಿಗೆ ಮೆಚ್ಚಿ ಆಶೀರ್ವದಿಸಿ, ನೀನು 'ವಾಲ್ಮೀಕಿ'ಯೆಂದು ಪ್ರಸಿದ್ಧನಾಗು ಎಂದು ಆಶೀರ್ವದಿಸಿದರಂತೆ.

ಭಾರತೀಯ ಸಂಸ್ಕೃತಿಯ ಅನನ್ಯತೆ, ಜೀವ ಘಟಕವಾದ ಕುಟುಂಬದೊಳಗಿನ ಒಡನಾಟಗಳು ಮತ್ತು ಬಿಕ್ಕಟ್ಟುಗಳು ಯಾವ ಬಗೆಯಲ್ಲಿವೆ ಎಂಬುದಕ್ಕೆ ರಾಮಾಯಣವೇ ಸಾಕ್ಷಿಯಾಗಿದೆ. ಕುಟುಂಬದ ಸದಸ್ಯರ ನಡುವೆ ಬಿಕ್ಕಟ್ಟುಗಳು ಎದುರಾದಾಗ ಒಡಕು ಉಂಟಾಗುವ ಸಹಜತೆಗಳನ್ನು ಇಲ್ಲಿ ಬಿಂಬಿಸಲಾಗಿದೆ. ಮಹರ್ಷಿ ವಾಲ್ಮೀಕಿಯವರು ಮಹಾಕಾವ್ಯದಲ್ಲಿ ಪ್ರಕೃತಿ ಮೌಲ್ಯವನ್ನು ಬಹಳಷ್ಟು ಮನಮೋಹಕವಾಗಿ ಚಿತ್ರಿಸಿದ್ದಾರೆ. ರಾಮನಿಗೆ ಬೆಂಬಲವಾಗಿ ನಿಲ್ಲುವ ಕಪಿಸೈನ್ಯ, ಸೀತೆಯನ್ನು ರಾವಣನಿಂದ ಬಿಡಿಸಲು ಹೋರಾಡುವ ಜಟಾಯು, ಅದರ ಸಹೋದರ ಸಂಪಾತಿ ಹೀಗೆ ಸಕಲ ಜೀವ ಸಂಕುಲವು ಪ್ರಕೃತಿ ಸಮಸ್ತವೂ ಅನನ್ಯವಾದ ಜೀವಪರತೆ ಯಿಂದ ಸುಳಿದುಹೋಗುತ್ತವೆ.

ಹದಿನಾಲ್ಕು ವರ್ಷಗಳ ವನವಾಸದ ಅವಧಿಯಲ್ಲಿ ರಾಮ, ಸೀತೆ, ಲಕ್ಷ್ಮಣರಿಗೆ ಪ್ರಕೃತಿಯೇ ಜೊತೆಯಾಗಿ, ತಾಯಿಯ ಮಡಿಲನ್ನು ಬಿಟ್ಟು ಅವರು ಸೇರಿದ್ದು ಪ್ರಕೃತಿ ಮಾತೆಯ ಮಡಿಲನ್ನು. ಪ್ರಕೃತಿಯೊಂದಿಗೆ ಅವರು ಹೊಂದಿರುವ ಭಾವನಾತ್ಮಕ ಬೆಸುಗೆ ಮುಂತಾದ ಅಂಶಗಳು ಈ ಮಹಾಕಾವ್ಯದಲ್ಲಿ ಬಿಂಬಿತವಾಗಿದೆ. ಹೀಗೆ ವಾಲ್ಮೀಕಿ ರಚನೆಯ ರಾಮಾಯಣ ಮಹಾಕಾವ್ಯದಲ್ಲಿ ಕಾವ್ಯದುದ್ದಕ್ಕೂ ನೈತಿಕ ಮೌಲ್ಯವು ಪ್ರಧಾನವಾಗಿ ಬಿಂಬಿತವಾಗಿದೆ. ಇಂತಹ ಮಹಾ ಕಾವ್ಯ ನೀಡುವ ಸಂದೇಶಗಳು ಸರ್ವರಿಗೂ ಸರ್ವಕಾಲಕ್ಕೂ ಜೀವನದ ಮಾರ್ಗದರ್ಶಿಯಾಗಿವೆ. ಇಂದು ಇಂತಹ ಘನ ವ್ಯಕ್ತಿತ್ವವನ್ನು ಹೊಂದಿರುವ ಮಹರ್ಷಿ ವಾಲ್ಮೀಕಿ ಅವರ ಜಯಂತಿ ಆಚರಣೆಯ ಜೊತೆಗೆ ಅನುಕರಣೆಯೂ ಅಷ್ಟೇ ಮುಖ್ಯ ಹಾಗೂ ಅವಶ್ಯ ಕೂಡ. ಮಹಾನ್ ವ್ಯಕ್ತಿತ್ವವನ್ನು ಸ್ಮರಿಸುವ ನಾವು ಅವರ ತಾತ್ವಿಕ ವಾಸ್ತವಿಕ ವಿಚಾರಧಾರೆಗಳನ್ನು ಅನುಸರಿಸುವ ಮೂಲಕ ಗೌರವ ಸಲ್ಲಿಸೋಣ.



– ಸುಧಾ ಹುಚ್ಚಣ್ಣವರ.
ಅಧ್ಯಕ್ಷರು, ಗದಗ ಜಿಲ್ಲಾ ಕದಳಿ ಮಹಿಳಾ ವೇದಿಕೆ.

ಸೀಗೆ ಹುಣ್ಣಿಮೆಯಂದು ಭೂದೇವಿಗೆ ಪೂಜೆ ನಿಮಿತ್ತ ಸಾಂದರ್ಭಿಕ ಲೇಖನ

# ಭೂರಮೆಗೆ ಮೆರುಗು ನೀಡುವ 'ಸೀಗೆ ಹುಣ್ಣಿಮೆ'



ಭಾರತ ಕೃಷಿ ಪ್ರಧಾನವಾದ ದೇಶ. ಭೂಮಿತಾಯಿಯನ್ನು ನಂಬಿ ವರ್ಷವಿಡೀ ದುಡಿಯುವ ರೈತ, ತನ್ನ ಪರಿಶ್ರಮಕ್ಕೆ ತಕ್ಕ ಫಲವನ್ನು ನೀಡೆಂದು ಭೂಮಾತೆಯನ್ನು ಪೂಜಿಸಿ ಬೇಡುವ ಪವಿತ್ರ ಆಚರಣೆಯೇ ಭೂಮಿಹುಣ್ಣಿಮೆ ಹಬ್ಬ.

ಹಸಿರುಟ್ಟ ಭೂದೇವಿಗೆ ಉಡಿ ತುಂಬಿ ಶೃಂಗರಿಸಿ, ಸೀಮಂತ ಮಾಡುವ ಕಾರ್ಯಗಳು ಈ ದಿನ ನಡೆಯುತ್ತವೆ. ಭೂಮಿ ತಾಯಿ ಫಸಲು ಹೊತ್ತು ನಿಂತಿರುವ ಸಮಯ. ಆದರೆ ಪ್ರಸ್ತಕ ವರ್ಷ ಬರಗಾಲ ಮತ್ತು ಹಿಂಗಾರು ಮಳೆಯ ಕೊರತೆಯಿಂದ ರೈತರು ಕಂಗಾಲಾಗಿದ್ದಾರೆ. ಆದರೂ ಸಹ ಭೂತಾಯಿ ಪೂಜೆ ಬಿಡಬಾರದು ಎಂಬ ಉದ್ದೇಶದಿಂದ ಉತ್ತರ ಕರ್ನಾಟಕದಲ್ಲಿ ಸೀಗಿ ಅಥವಾ ಸೀಗೆ ಹುಣ್ಣಿಮೆಯನ್ನು ಸಂಭ್ರಮ ಸಡಗರದಿಂದ ಆಚರಣೆ ಮಾಡುವುದು ಕಂಡುಬರುತ್ತದೆ.

ವಿಜಯದಶಮಿಯ ದಸರಾ ಹಬ್ಬ ಮುಗಿಯುತ್ತಿದ್ದಂತೆ ಬರುವ ಹಬ್ಬವೇ ಸೀಗೆ ಹುಣ್ಣಿಮೆ. ಇದು ಭೂರಮೆಗೆ ಮೆರುಗು ನೀಡುವ ಭೂಮಿಯ ಹುಣ್ಣಿಮೆ ದಿನ. ಭೂ ತಾಯಿ ಹಸಿರಿನಿಂದ ಕಂಗೊಳಿಸುವ ಕಾಲವಿದು. ಅಂದು ಉತ್ತರ ಕರ್ನಾಟಕದ ವಿವಿಧ ಭಾಗಗಳಲ್ಲಿ ರೈತ ಸಮೂಹದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಈ ಹಬ್ಬ ಹೊಂದಿದೆ. ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡಿದ ಬೆಳೆಯು ಈಗ ತೆನೆ ತುಂಬಿಕೊಂಡು ನಲಿಯುತ್ತಿರುತ್ತದೆ. ಧಾನ್ಯ ರಾಶಿಯ ಸಂಭ್ರಮದೊಂದಿಗೆ ಚಳಿಗಾಲವನ್ನು ಸ್ವಾಗತಿಸುವ ಸಂಕ್ರಮಣದ ಕಾಲವೂ ಹೌದು.

ಸಾಮಾನ್ಯವಾಗಿ ಗರ್ಭಿಣಿಯರಿಗೆ ಸೀಮಂತ ಮಾಡುವುದು ವಾಡಿಕೆ. ಅದರಂತೆ ಸೀಗೆ ಹುಣ್ಣಿಮೆಯಂದು ರೈತರು ಪೈರಿನಿಂದ ಒಡಲು ತುಂಬಿಕೊಂಡ ಭೂದೇವಿಗೂ ಸೀಮಂತ ಕಾರ್ಯ ಮಾಡುತ್ತಾರೆ. ಅಂದು ಫಸಲಿಗೆ ಉಡಿ ಕಟ್ಟಿ ಸೀರೆ, ಕುಪ್ಪಸ ತೊಡಿಸಿ ಪೂಜಿಸಿ, ಹೊಲದ ಸುತ್ತಲೂ ಚರಗ ಚೆಲ್ಲಿ ಹೊಲದಲ್ಲಿ ಐದು ಕಲ್ಲುಗಳನ್ನು ಇಟ್ಟು ಅವುಗಳಿಗೆ ಸುಣ್ಣ ಮತ್ತು ಕೆಮ್ಮಣ್ಣು ಹಚ್ಚಿ, ಪಾಂಡವರು ಎಂದು ಪೂಜಿಸಲಾಗುತ್ತದೆ. ನಂತರ ವಿವಿಧ ಪದಾರ್ಥಗಳ ನೈವೇದ್ಯ ಮಾಡಲಾಗುತ್ತದೆ. ಪಾಂಡವರ ಮೂರ್ತಿಗಳ ಹಿಂದೆ ಕಳ್ಳರ ಮೂರ್ತಿಗಳನ್ನು ಇಟ್ಟು ಪೂಜಿಸುವ ವಾಡಿಕೆಯೂ ಇದೆ.

ಬೆಳಿಗೆ ಹಾಗೂ ತಮ್ಮ ಹೊಲದಲ್ಲಿರುವ ದೇವರಿಗೆ ವಿಶೇಷವಾಗಿ ಪೂಜೆ ಸಲ್ಲಿಸಿ, ನಂತರ ಮನೆಯ ಕೆಲವು ಸದಸ್ಯರು ತಮ್ಮ ತಮ್ಮ ಹೊಲದ ಅಕ್ಕ ಪಕ್ಕದಲ್ಲಿ ಅಂದರೆ ಹತ್ತಿರದಲ್ಲಿರುವ ಏಳು ಮಕ್ಕಳ ತಾಯವ್ವ, ಹೊನ್ನತ್ತೆಮ್ಮ, ಬೀರಪ್ಪ, ರಾಮಲಿಂಗಪ್ಪ, ಕಟಗಿ ಸಂಗಯ್ಯ, ಹುಡೇದ ಭರಮಪ್ಪ, ಬಸವಣ್ಣ, ಕರಿಯಮ್ಮ ಹಾಗೂ ಹಿರಿಯರ ಸಮಾಧಿ, ಹೀಗೆ ಯಾವ ದೇವರ ಹೆಸರಿನಲ್ಲಿ ಸಣ್ಣಪುಟ್ಟ ಗದ್ದುಗೆ ಅಥವ ಗುಡಿಗಳಿರುತ್ತವೆಯೋ ಅವುಗಳಿಗೆ ಹೋಗಿ ನೈವೇದ್ಯ ಅರ್ಪಿಸಿ ಬರುವರು. ಹೀಗೆ ಎಲ್ಲರೂ ಒಂದೆಡೆ ಸೇರಿ ಹೊಲದಲ್ಲಿ ಚರಗ ಚೆಲ್ಲುವರು.

ಚರಗ ಚೆಲ್ಲಿದ ನಂತರ ಹೊಲದಲ್ಲಿ ಮನೆಯಿಂದ ತಂದಿರುವ ಒಂದು ವಾರದ ಮುಂಚೆಯೇ ಮಾಡಿದ ವಿವಿಧ ಬಗೆಯ ತಿಂಡಿ ತಿನಿಸುಗಳನ್ನು ಸೀಗೆ ಹುಣ್ಣಿಮೆ ದಿನದಂದು ಕುಟುಂಬ ವರ್ಗದವರು, ಬಂಧು-ಬಳಗ, ಸ್ನೇಹಿತರು ಮತ್ತು ಪಕ್ಕದ ಮನೆಯವರು ಎಲ್ಲರೂ ಸೇರಿ ಒಂದೆಡೆ ಕುಳಿತು ಸಂಭ್ರಮದಿಂದ ಊಟವನ್ನು ಸವಿಯುತ್ತಾರೆ. ನಂತರ ಚಿಕ್ಕ ಮಕ್ಕಳಿಂದ ಹಿಡಿದು ದೊಡ್ಡವರು ಸಹ ಗಾಳಿಪಟ ಹಾರಿಸಿ ಸಂತೋಷಪಡುತ್ತಾರೆ.



ಒಟ್ಟಾರೆಯಾಗಿ ಭೂತಾಯಿಯ ಆರಾಧನೆಗೆ ಮೀಸಲಿರುವ ಸೀಗೆ ಹುಣ್ಣಿಮೆ. ಈ ಪ್ರದೇಶದಲ್ಲಿ ಶ್ರದ್ಧೆಯಿಂದ ನಡೆದು ಗಮನ ಸೆಳೆಯುತ್ತದೆ. ಶಾಲೆಗೆ ಹೋಗುವ ಮಕ್ಕಳು ಸ್ಥಳೀಯ ರಜೆಯ ಮೇರೆಗೆ, ವ್ಯಾಪಾರ, ವಹಿವಾಟು ಸ್ಥಗಿತಗೊಳಿಸಿದ್ದ ವ್ಯಾಪಾರಸ್ಥರು ಸಹ ಹುಣ್ಣಿಮೆ ಸಂಭ್ರಮಾಚರಣೆಯಲ್ಲಿ ತೊಡಗಿರುತ್ತಾರೆ. ಈ ಹುಣ್ಣಿಮೆ ದಿನದಂದು ಲಕ್ಷ್ಮೇಶ್ವರದ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಸೀಗೆ ಹುಣ್ಣಿಮೆ ಸಡಗರ ಸಂಭ್ರಮ ಮುಗಿಲುಮುಟ್ಟಿರುತ್ತದೆ. ಅದರಂತೆ ಗದಗ ಹಾವೇರಿ, ಧಾರವಾಡ ಬೆಳಗಾವಿ, ವಿಜಯಪುರ, ಬಾಗಲಕೋಟೆ ಹಾಗೂ ಕಲ್ಯಾಣ ಕರ್ನಾಟಕದ ಜಿಲ್ಲೆಯ ಹಲವೆಡೆ ರೈತರು ಸಂಭ್ರಮದಿಂದ ಮುಂಗಾರು ಹಂಗಾಮಿನಲ್ಲಿ ಸೀಗೆ ಹುಣ್ಣಿಮೆ ಹಾಗೆಯೇ ಹಿಂಗಾರು ಹಂಗಾಮಿನಲ್ಲಿ ಎಳ್ಳು ಅಮವಾಸ್ಯೆಗೆ ಭೂಮಿಯ ಪೂಜೆ ಸಲ್ಲಿಸಿ ಸಂಭ್ರಮದಿಂದ ಆಚರಿಸುತ್ತಾರೆ.




– ಬಸವರಾಜ ಎಮ್.ಯರಗುಪ್ಪಿ.
ಲಕ್ಷ್ಮೇಶ್ವರ.

ಶ್ರೀ ಮಹರ್ಷಿ ವಾಲ್ಮೀಕಿಯವರ ಜನ್ಮದಿನದ ನಿಮಿತ್ತ ಸಾಂದರ್ಭಿಕ ಬರಹ

# ಮಹರ್ಷಿ ವಾಲ್ಮೀಕಿಯ ಆದರ್ಶ ಇಂದಿಗೂ ಪ್ರೇರಣೆ

ನಮ್ಮ ದೇಶವು ಅನೇಕ ಧರ್ಮಗಳ ನೆಲೆಬೀಡು, ಹಲವು ಸಾಧು-ಸಂತರ, ಋಷಿ ಮುನಿಗಳು, ದಾಸರು, ಶರಣರು ಮಹರ್ಷಿಗಳು ನೆಲೆಸಿದ ಈ ಪವಿತ್ರ ಪುಣ್ಯಭೂಮಿಯಲ್ಲಿ ರಾಮಾಯಣದಂತ ಮಹಾಕಾವ್ಯ ವೇದಕ್ಕೆ ಸಮಾನವಾದ ಪವಿತ್ರ ಮತ್ತು ಶ್ರೇಷ್ಠ ಮೌಲಿಕ ಗ್ರಂಥವನ್ನು ರಚಿಸಿ ಜಗತ್ತಿನ ಸಾಹಿತ್ಯಕ್ಕೆ ಮಹರ್ಷಿ ವಾಲ್ಮೀಕಿ ನೀಡಿದ ಅತ್ಯುತ್ತಮ ಕೊಡುಗೆಯಾಗಿದೆ. ಕವಿಗಳಿಗೆಲ್ಲ ಕವಿಯಾದ ಶ್ರೀ ಮಹರ್ಷಿ ವಾಲ್ಮೀಕಿಯ ಜಯಂತಿಯನ್ನು ನಾಡಿನಾದ್ಯಂತ ಆಚರಿಸಲಾಗುತ್ತಿದೆ.

ವಾಲ್ಮೀಕಿಯು ಭಾರತ ಮತ್ತು ಪ್ರಪಂಚದ ಚರಿತ್ರೆಯಲ್ಲಿ ಎಂದೋ ಮಿನುಗಿದ ಧೃವತಾರೆಯಾಗಿ ಆದಿಕವಿ, ಮಹರ್ಷಿ, ಮುನಿ, ಪುಂಗವ, ತಪಸ್ವಿ, ಎಂದೆಲ್ಲಾ ಖ್ಯಾತಿ ಪಡೆದಿರುವ ಶ್ರೀ ವಾಲ್ಮೀಕಿ ಮಹರ್ಷಿಯ ಪೂರ್ವ ಚರಿತ್ರೆಯ ಕುರಿತಾಗಿ, ವಿಭಿನ್ನ ಕಥೆಗಳಿವೆ. ಈ ಕುರಿತು ಹಲವು ಸಂಶೋಧನೆಗಳು ನಡೆದಿವೆ. ಆದರೂ ವಾಲ್ಮೀಕಿ ಕುರಿತು ಹೆಚ್ಚಿನ ಮಾಹಿತಿ ಅಸ್ಪಷ್ಟವಾಗಿವೆ. ರಾಮಾಯಣ 24 ಸಾವಿರ ಶ್ಲೋಕ. 7 ಖಂಡಗಳ ಬೃಹತ್ ಕಾವ್ಯವಾಗಿದೆ.




ವಾಲ್ಮೀಕಿ ಕೇವಲ ಪಂಡಿತನಲ್ಲದೆ, ಶಿಕ್ಷಣಪ್ರೇಮಿ, ಆದರ್ಶ ಶಿಕ್ಷಕನಾಗಿರುವುದನ್ನು ನಾವು ಸೀತಾಮಾತೆ-ಶ್ರೀರಾಮನ ಮಕ್ಕಳಾದ ಲವ-ಕುಶರಿಗೆ ಶಾಸ್ತ್ರ ಮತ್ತು ಶಸ್ತ್ರಾಭ್ಯಾಸ, ವಿಧಿವಿಧಾನ ಸಂಸ್ಕಾರಗಳನ್ನು ಬಿಲ್ಲುವಿದ್ಯೆ, ಧನುರ್ವಿದ್ಯೆ ಸಕಲ ವಿದ್ಯಾಪಾರಂಗತರನ್ನಾಗಿ ಮಾಡಿರುವುದನ್ನು ನೋಡುತ್ತೇವೆ. ರಾಮಾಯಣದಲ್ಲಿ ಬರುವ ಪಾತ್ರಗಳೆಲ್ಲ ಜೀವನದ ನೀತಿಯನ್ನು ಸಾರುತ್ತವೆ. ಸೀತೆಯ ಪಾವಿತ್ರ್ಯತೆ, ಲಕ್ಷ್ಮಣ ಹಾಗೂ ಭರತನ ಭ್ರಾತೃ ಪ್ರೇಮ, ಹನುಮಂತನ ಸ್ವಾಮಿನಿಷ್ಠೆ, ಊರ್ಮಿಳೆಯ ತ್ಯಾಗ, ರಾವಣ, ವಿಭೀಷಣ ಹೀಗೆ ಪ್ರತಿ ಪಾತ್ರಗಳ ಒಳಿತು ಕೆಡಕುಗಳ ಪರಿಚಯ ಮಾಡಿಕೊಡುತ್ತ. ನಿಸರ್ಗ, ಪ್ರಾಣಿಗಳ ವರ್ಣನೆ ಅದ್ಭುತವಾಗಿ ಚಿತ್ರಿಸಲಾಗಿದೆ.

ವಾಲ್ಮೀಕಿ ಸಮುದಾಯವು ಮೂಲತಃ ಬೇಟೆಗಾರಿಕೆಯನ್ನೇ ವೃತ್ತಿಯನ್ನಾಗಿಸಿಕೊಂಡು ಕಾಡಿನಲ್ಲಿ ನೆಲೆ ಸ್ಥಾಪಿಸಿಕೊಂಡವರು. ಕಾಲಘಟ್ಟಕ್ಕೆ ಅನುಗುಣವಾಗಿ ನಾಡಿನ ಸಂಸ್ಕೃತಿ ರೂಢಿಸಿಕೊಂಡ ವಿಶಿಷ್ಟ ಸಮುದಾಯವೆಂದರೆ ಬೇಡ ನಾಯಕರೆಂದೆನ್ನಬಹುದು. 'ಜಗತ್ತಿನಲ್ಲಿ ಬೇಡರಷ್ಟು ಶೂರರು ಸಿಗಬಹುದು ಆದರೆ ಬೇಡರಿಗಿಂತ ಶೂರರು ಸಿಗಲಾರರು' ಎನ್ನುವ ವಿಲಿಯಂ ಸ್ಮಿಥ್‌ರ ಅಭಿಪ್ರಾಯದಂತೆ ದೈಹಿಕವಾಗಿ, ಸದೃಢವಾಗಿದ್ದು, ಧೈರ್ಯ ಸಾಹಸಕ್ಕೆ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೆಸರುವಾಸಿಯಾದ ಅನೇಕ ಪ್ರಾತಃಸ್ಮರಣೀಯರನ್ನು ಹೊಂದಿರುವ ಸಮುದಾಯ ಇದಾಗಿದೆ.

– ಗಿರೀಶ ಬಂಡಿಹಾಳ.
ಹುಲಕೋಟಿ.

ಜಿಲ್ಲಾಮಟ್ಟದ ಅಧಿಕಾರಿಗಳ ಮಾಸಿಕ ಭೇಟಿ ಕಡ್ಡಾಯ

# ವಿದ್ಯಾರ್ಥಿ ನಿಲಯಗಳ ಸುಧಾರಣೆಗೆ ಮೇಲುಸ್ತುವಾರಿ ವಹಿಸಲು ಸೂಚನೆ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಜಿಲ್ಲೆಯಲ್ಲಿ ವಿವಿಧ ಇಲಾಖೆಗಳ ಆಶ್ರಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿಯುತ ಶಾಲಾ- ಕಾಲೇಜು ಸೇರಿದಂತೆ ವಿದ್ಯಾರ್ಥಿ ನಿಲಯ ಸುಧಾರಣೆಗೆ ಅಗತ್ಯಕ್ರಮ ಕೈಗೊಳ್ಳಬೇಕು. ಜತೆಗೆ, ಜಿಲ್ಲಾಮಟ್ಟದ ಅಧಿಕಾರಿಗಳು ಪ್ರತಿ ತಿಂಗಳು ಒಂದು ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡುವ ಮೂಲಕ ವ್ಯವಸ್ಥೆಯನ್ನು ಪರಿಶೀಲಿಸಿ, ವರದಿ ಸಲ್ಲಿಸುವಂತೆ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯ ನಿರ್ವಹಣಾಧಿಕಾರಿ ರಾಹುಲ್ ರತ್ನ ಪಾಂಡೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ಜಿಲ್ಲಾ, ತಾಲ್ಲೂಕು ಮಟ್ಟದ ಅಧಿಕಾರಿಗಳ ಹಾಗೂ ಮೂರು ಇಲಾಖೆಗಳ ವಸತಿ ನಿಲಯಗಳ ಮೇಲ್ವಿಚಾರಕರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಪ್ರತಿ ತಿಂಗಳು ನಿಲಯಗಳಿಗೆ ಕಡ್ಡಾಯವಾಗಿ ಭೇಟಿ ನೀಡುವ ಮೂಲಕ ಕೂಲಂಕಷವಾಗಿ ಪರಿಶೀಲನೆ ನಡೆಸಬೇಕು.ವಿದ್ಯಾರ್ಥಿಗಳು ಹಾಗೂ ನಿಲಯ ಮೇಲ್ವಿಚಾರಕರೊಂದಿಗೆ ಚರ್ಚಿಸಬೇಕು. ಸಮಸ್ಯೆಗಳು ಕಂಡುಬಂದಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳ ಹಂತದಲ್ಲಿಯೇ ನಿವಾರಿಸಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ವಸತಿನಿಲಯಗಳ ನಿಲಯಾರ್ಥಿಗಳಿಗೆ ಇಲಾಖೆಯ ನಿಯಮಾನುಸಾರವೇ ಗುಣಮಟ್ಟದ ಊಟ ಹಾಗೂ ಉಪಹಾರವನ್ನು ಪೂರೈಕೆ ಮಾಡಬೇಕು. ಜತೆಗೆ, ದೈನಂದಿನ ಮೇನುಚಾಟ್ ಅನ್ನು ಕಡ್ಡಾಯವಾಗಿ ಅನುಸರಿಸಬೇಕು.

ನಿಲಯಗಳಲ್ಲಿ ಶುಚಿತ್ವವನ್ನು ಕಾಪಾಡಬೇಕು ನಿಲಯದ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ತರಬೇತಿ, ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ನಡೆಸಲು ಹಾಗೂ ಅದಕ್ಕೆ ಪೂರಕವಾದ ಪುಸ್ತಕಗಳನ್ನು ನಿಲಯಗಳಿಗೆ ಖರೀದಿಸುವಂತೆ ರಾಹುಲ್‌ರತ್ನಂ ಪಾಂಡೆ ಅವರು ನಿಲಯ ಮೇಲ್ವಿಚಾರಕರು ಹಾಗೂ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಸುರೇಶ ಕೋಕರೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ವಿಜಯಕುಮಾರ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾಅಧಿಕಾರಿ ರಾಜು ಮತ್ತು ತಾಲ್ಲೂಕು ಮಟ್ಟದ ಮೂರು ಇಲಾಖೆಗಳ ಅಧಿಕಾರಿಗಳು, ನಿಲಯಗಳ ಮೇಲ್ವಿಚಾರಕರು ಹಾಜರಿದ್ದರು.

# ಹಜರತ್ ಸೈಯದ ಶಹಾ ಮೆಹಬೂಬ ಸುಬ್ಹಾನಿಯವರ ದರ್ಗಾ ಉರುಸು



■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಪಟ್ಟಣದ ಬೆಟ್ಟದ ಮೇಲಿರುವ ಹಜರತ್ ಸೈಯದ ಶಹಾ ಮೆಹಬೂಬ ಸುಬ್ಹಾನಿಯವರ ದರ್ಗಾದ ಉರುಸು ಶುಕ್ರವಾರ ಅದ್ದೂರಿಯಾಗಿ ನಡೆಯಿತು.

ಹಿಂದೂ-ಮುಸ್ಲಿಂರನ್ನು ಭಾವನಾತ್ಮಕವಾಗಿ ಬೆಸೆಯುವ ಉರುಸುಗಳು ಭಾವೈಕ್ಯತೆಯ ಸಂಕೇತವಾಗಿ ಕೋಮು ಸೌಹಾರ್ದತೆಗೆ ಸಾಕ್ಷಿಯಾಗಿ ನಿಂತಿದೆ. ಉರುಸು ಎಂದರೆ ಮಹಮ್ಮದೀಯ ಸಾಧುಗಳ ಪುಣ್ಯತಿಥಿ ಮತ್ತು ಅಂದು ನಡೆಸುವ ಜಾತ್ರೆ ಎಂಬುದಾಗಿದೆ.

ಗ್ರಾಮೀಣ ಪ್ರದೇಶದ ಜನ ಯಾವ ಜಾತಿ ಭೇದಗಳಿಲ್ಲದೇ ಭಾವನಾತ್ಮಕವಾಗಿ ಜೀವನ ನಡೆಸುತ್ತಾ ಬಂದಿದ್ದು, ಸ್ಥಳೀಯ ಗಜೇಂದ್ರಗಡದ ಬೆಟ್ಟದ ಮೇಲಿರುವ ದರ್ಗಾದಲ್ಲಿ ಪ್ರತಿ ವರ್ಷ ಉರುಸು ಜರುಗುತ್ತದೆ. ಆದರೆ, ಯಾವುದೇ ಜಾತಿ ಮತ್ತು ಧರ್ಮಕ್ಕೆ ಸೀಮಿತವಾಗದೇ ಎಲ್ಲ ಜನಾಂಗ ಮತ್ತು ಧರ್ಮೀಯರು ಒಟ್ಟುಗೂಡಿ ಉರಸನ್ನು ವೈಭವದಿಂದ ಆಚರಿಸುತ್ತಾರೆ.

ಎಲ್ಲರೂ ಈ ಶರಣರ ದರ್ಗಾದಲ್ಲಿ ಶ್ರದ್ಧೆ-ಭಕ್ತಿಯಿಂದ ಸಕ್ಕರೆ ಪೂಜೆ ಮಾಡಿಸಿ ಕೃತಾರ್ಥರಾಗುತ್ತಾರೆ. ಮೂಲತಃ ಸೂಫಿ ಪಂಥದವರಾದ ಹಜರತ್ ಸೈಯದ ಶಹಾ ಮೆಹಬೂಬ ಸುಬ್ಹಾನಿ ಕಳೆದ ಹತ್ತು ದಶಮಾನ ವರ್ಷಗಳ ಹಿಂದೆ ಗಜೇಂದ್ರಗಡಕ್ಕೆ ಬಂದಿದ್ದರು. ಧರ್ಮ ಪ್ರಚಾರಕ್ಕಿಂತ ಸೌಹಾರ್ದತೆ, ಸಹಜೀವನ, ಸಹಬಾಳ್ವೆಗೆ ಒತ್ತು ಕೊಟ್ಟ ಹಜರತ್ ಸೈಯದ ಶಹಾ ಮೆಹಬೂಬ ಸುಬ್ಹಾನಿರವರು ಹಳ್ಳಿಗಳಲ್ಲಿ ತಿರುಗಿ ಸಮಾನತೆಯ ಸಂದೇಶ ಸಾರಿದರು. ನಂತರ ಗಜೇಂದ್ರಗಡ ಬೆಟ್ಟದಲ್ಲಿ ಸಮಾಧಿ ಹೊಂದಿದ್ದರು. ಉರುಸು ಹಿನ್ನೆಲೆಯಲ್ಲಿ ಸಮಾಧಿ ಸ್ಥಳಕ್ಕೆ ಭೇಟಿ ನೀಡಿ ಭಕ್ತಿಯಿಂದ ಪೂಜೆ ಸಲ್ಲಿಸುವ ಭಕ್ತರು ತಮ್ಮ ಇಷ್ಟಾರ್ಥ ಹರಕೆ ಬೇಡಿಕೊಳ್ಳುತ್ತಾರೆ.



ಹರಪನಹಳ್ಳಿಯಲ್ಲಿ ನಡೆದ 2023-24ನೇ ಸಾಲಿನ ವಿಜಯನಗರ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಕುಂಚೂರು ಗ್ರಾಮದ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಯ 7ನೇ ತರಗತಿ ವಿದ್ಯಾರ್ಥಿನಿ ಸಂಜನಾ ಜೆ.ಹಲವಾಗಲು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಪ್ರಾಂಶುಪಾಲ ನಾಗರಾಜ, ತಾಲೂಕು ದೈಹಿಕ ಶಿಕ್ಷಣಾಧಿಕಾರಿ ಷಣ್ಮುಖಪ್ಪ, ವಸತಿ ಶಾಲೆಯ ಪ್ರಾಂಶುಪಾಲರು, ಬೋಧಕ-ಬೋಧಕೇತರ ಸಿಬ್ಬಂದಿ ಮತ್ತು ಪೋಷಕರು ಶುಭ ಹಾರೈಸಿದ್ದಾರೆ.

# 18 ತಿಂಗಳ ಗರ್ಭಿಣಿ 'ಭಾನುಮತಿ' ಆನೆ ಬಾಲ ಕತ್ತರಿಸಿದ ಕಿಡಿಗೇಡಿಗಳು!

■ ವಿಜಯಸಾಕ್ಷಿ ಸುದ್ದಿ, ಶಿವಮೊಗ್ಗ

ಶಿವಮೊಗ್ಗ ಜಿಲ್ಲೆಯ ಸಕ್ರೆಬೈಲು ಆನೆ ಶಿಬಿರದಲ್ಲಿ ದುಷ್ಕರ್ಮಿಗಳು ಆನೆಯ ಮೇಲೆ ದಾಳಿ ಮಾಡಿ ಬಾಲವನ್ನು ತುಂಡರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಘಟನೆ ಕಳೆದ ವಾರ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ಆರೋಪಿಗಳು ಭಾನುಮತಿ ಎಂಬ 18 ತಿಂಗಳ ಗರ್ಭಿಣಿ ಆನೆಯ ಮೇಲೆ ದಾಳಿ ಮಾಡಿದ್ದರು. ತುಂಗಾ ನದಿಯಲ್ಲಿ ಸ್ನಾನ ಮಾಡಿಸಿ, ಸಿಬ್ಬಂದಿ ಶಿಬಿರದ ಆವರಣದಲ್ಲಿ ಆನೆಯನ್ನು ಮೇಯಲು ಬಿಟ್ಟಿದ್ದರು. ಈ ವೇಳೆ ದುಷ್ಕರ್ಮಿಗಳು ಈ ಕುಕೃತ್ಯ ಎಸಗಿದ್ದಾರೆ. ಪ್ರಸ್ತುತ ಅರಣ್ಯ ಇಲಾಖೆ ಆರೋಪಿಗಳಿಗಾಗಿ ಶೋಧ ಕಾರ್ಯ ಆರಂಭಿಸಲಾಗಿದೆ.

## ಗ್ರಹಣದ ಹಿನ್ನೆಲೆಯಲ್ಲಿ ಶುಕ್ರವಾರವೇ ಸೀಗೆ ಹುಣ್ಣಿಮೆ ಆಚರಿಸಿದ ಭೂಮಿಪುತ್ರರು

# ಉತ್ತಮ ಮಳೆ-ಬೆಳೆಗಾಗಿ ಭೂತಾಯಿಗೆ ಪ್ರಾರ್ಥನೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಒಣಗಿದ ಮುಂಗಾರು, ಕಮರಿದ ಹಿಂಗಾರಿನ ಬೆಳೆಗಳಿಂದ ಸಂಕಷ್ಟದಲ್ಲಿರುವ ಅನ್ನದಾತ ಸಂಪ್ರದಾಯದಂತೆ ಭೂತಾಯಿಗೆ ಉಡಿ ತುಂಬಿ, ಚರಗ ಚೆಲ್ಲುವ ಸೀಗಿ ಹುಣ್ಣಿಮೆ ಹಬ್ಬವನ್ನು ಎಲ್ಲೆಡೆ ಆಚರಿಸಿದರು. ಶನಿವಾರ ಗ್ರಹಣದ ಹಿನ್ನೆಲೆಯಲ್ಲಿ ಶುಕ್ರವಾರವೇ ಬಹುತೇಕ ರೈತರು ಸಂಪ್ರದಾಯ ನೆರವೇರಿಸಿದರು.

ಮುಂಗಾರಿನಲ್ಲಿ ಬಿತ್ತನೆ ಮಾಡಿದ್ದ ಶೇಂಗಾ, ಹತ್ತಿ, ಮೆಣಸಿನಕಾಯಿ, ಉಳ್ಳಾಗಡ್ಡಿ ಇನ್ನಿತರ ಬೆಳೆ ಒಕ್ಕಲಿ ಮಾಡುವ ಮತ್ತು ಹಿಂಗಾರಿನ ಬಿತ್ತನೆಯ ಈ ಸಂದರ್ಭದಲ್ಲಿ ಭೂತಾಯಿಗೆ ಉಡಿ ತುಂಬಿ, ಚರಗ ಚೆಲ್ಲಿ ಪೂಜೆ ಸಲ್ಲಿಸಿ, ಉತ್ತಮ ಮಳೆ-ಬೆಳೆಗಾಗಿ ಭೂತಾಯಿಯನ್ನು ಪ್ರಾರ್ಥಿಸುವ ಈ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ.



ಆದರೆ ರೈತ ಸಮುದಾಯ ಇಂದು ಅನಿವಾರ್ಯತೆಯ ನಡುವೆ ಹಬ್ಬದ ಆಚರಣೆಯಲ್ಲಿ ತೊಡಗುವಂತಾಗಿದೆ.

ಹಬ್ಬದ ದಿನ ಸಿಂಗರಿಸಿದ ಎತ್ತಿನ ಚಕ್ಕಡಿ, ಟ್ರ್ಯಾಕ್ಟರ್, ಕಾರು, ಟಂಟಂ, ಬೈಕ್ ವಾಹನಗಳಲ್ಲಿ ಹೊಸ ಉಡುಗೆ ತೊಟ್ಟು ಹೊರಟಿರುವ ಸಾಲು ನೋಡುವುದೇ ಚಂದ. ದಾರಿಯ ಮಧ್ಯೆ ಅಲಂಕರಿಸಿದ ಎತ್ತುಗಳು, ಕೊರಳಲ್ಲಿ ಕಟ್ಟಿದ ಗೆಜ್ಜೆಯ ನಾದ, ಹಳ್ಳಿ ಸೊಗಡಿನ ಜಾನಪದ ಗೀತೆಗಳ ನಿನಾದ... ಇವೆಲ್ಲವೂ ಭೂತಾಯಿಯ ಜಾತ್ರೆ ಎಂದೇ ಬಿಂಬಿಸುವಂತಿರುತ್ತದೆ.


ಬುತ್ತಿಯ ಗಂಟು, ನೀರು, ಸಕಲ ಸಲಕರಣೆಗಳೊಂದಿಗೆ ಹೊಲಕ್ಕೆ ತೆರಳಿದ ರೈತ ಕುಟುಂಬದವರು ಬನ್ನಿಗಿಡದ ಕೆಳಗೆ ಪಾಂಡವರ ಸ್ವರೂಪದ ಕಲ್ಲುಗಳಿಗೆ, ಬನ್ನಿ ಗಿಡಕ್ಕೆ ಸೀರೆ-ಕುಬುಸದಿಂದ ಶೃಂಗರಿಸಿ ಪೂಜೆ ಸಲ್ಲಿಸಲಾಗುತ್ತದೆ. ಬಳಿಕ ಹಬ್ಬಕ್ಕಾಗಿ ವಿಶೇಷವಾಗಿ ತಯಾರಿಸಿರುವ ಎಳ್ಳು ಹೋಳಿಗೆ, ಶೇಂಗಾ ಹೋಳಿಗೆ, ಖರ್ಚಿಕಾಯಿ, ಕರಿಗಡಬು, ಉಂಡೆಗಡುಬು, ಸಜ್ಜೆರೊಟ್ಟಿ, ಎಳ್ಳುಹಚ್ಚಿದ ರೊಟ್ಟಿ, ಪುಂಡಿಪಲ್ಯೆ, ಕರಿಹಿಂಡಿ, ಕಿಚಡಿ, ಅಕ್ಕಿಹುಗ್ಗಿ, ವಿವಿಧ ತರಹದ ಪಲ್ಲೆ, ಚಟ್ನಿ ಇತ್ಯಾದಿ ಭಕ್ಷ್ಯಗಳನ್ನು ಚರಗ ಚೆಲ್ಲಿ ಸಾಮೂಹಿಕವಾಗಿ ಕುಳಿತು ಊಟ ಮಾಡುತ್ತಾರೆ. ಈ ಹಬ್ಬಕ್ಕೆ ನೆರೆಹೊರೆಯವರು, ಬೀಗರು, ಗೆಳೆಯರು, ಸಂಬಂಧಿಕರು, ಕೃಷಿ ಕೂಲಿಕಾರರನ್ನು ಆಹ್ವಾನಿಸಲಾಗಿರುತ್ತದೆ.

> ಮುಂಗಾರಿನ ವೈಫಲ್ಯದ ನಡುವೆಯೂ ಹಿಂಗಾರಿನ ಬಿತ್ತನೆ ಮಾಡಿರುವ ರೈತ ಸಮುದಾಯ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿ ಒದ್ದಾಡುತ್ತಿದ್ದೇವೆ. ಹಿಂಗಾರಿನ ಮಳೆ ಆಗುತ್ತದೆ ಎಂಬ ಭರವಸೆಯಿಂದ ಆಹಾರ ಧಾನ್ಯ ಮತ್ತು ಜಾನುವಾರುಗಳ ಮೇವು-ಹೊಟ್ಟೆಗಾಗಿಯೇ ಬೆಳೆಯುವ ಹಿಂಗಾರಿನ ಜೋಳ, ಗೋದಿ, ಕಡಲೆ, ಮಡಕಿ, ಹುರುಳಿ ಬಿತ್ತನೆ ಮಾಡಿದ್ದೇವೆ. ಮಳೆಯೇ ಇಲ್ಲದ್ದರಿಂದ ಮುಂದೆ ಹೇಗೆಂಬ ಚಿಂತೆ ಕಾಡುತ್ತಿದೆ. ಇವೆಲ್ಲವುಗಳ ನಡುವೆಯೂ ಸಂಪ್ರದಾಯ ಬಿಡಬಾರದೆಂದು ಬರುವ ಎಲ್ಲ ಹಬ್ಬಗಳನ್ನು ಅನಿವಾರ್ಯತೆಯ ನಡುವೆ ಸಾಲ-ಸೋಲ ಮಾಡಿಯಾದರೂ ಆಚರಿಸುತ್ತಿದ್ದೇವೆ. ಸರ್ಕಾರ ರೈತರಿಗೆ ಕಟ್ಟಿರುವ ಬೆಳೆ ವಿಮೆ, ಬೆಳೆಹಾನಿ ಪರಿಹಾರ, ಸಹಾಯ ಧನ ಕಲ್ಪಿಸಿ ಸಂಕಷ್ಟದಲ್ಲಿರುವ ರೈತರಿಗೆ ಕಿಂಚಿತ್ತಾದರೂ ಆಸರೆಯಾಗಬೇಕು.
>
> **– ಸೋಮನಗೌಡ ಪಾಟೀಲ.**
> ರೈತರು, ಲಕ್ಷ್ಮೇಶ್ವರ.

# ತಾಲೂಕು ಸಾಧು ಲಿಂಗಾಯತ ಸಮಾಜದ ಮಹಾಸಭೆ

■ ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ತರಳಬಾಳು ಜಗದ್ಗುರು 1108 ಡಾ.ಶಿವಮೂರ್ತಿ ಶಿವಚಾರ್ಯ ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ಕೃಪಾಶೀರ್ವಾದದೊಂದಿಗೆ ಅ. 29ರಂದು ಬೆಳಿಗ್ಗೆ 10.30ಕ್ಕೆ ಶ್ರೀ ತರಳಬಾಳು ಕಲ್ಯಾಣ ಮಂಟಪದಲ್ಲಿ ತಾಲೂಕು ಸಾಧು ಲಿಂಗಾಯತ ಸಮಾಜದ ಮಹಾಸಭೆಯನ್ನು ಕರೆಯಲಾಗಿದೆ.



ವಿಶ್ವಬಂಧು ಸೌಹಾರ್ದ ಸಹಕಾರಿ ಸಂಘ ನಿಯಮಿತ ಇದರ ಚುನಾವಣಾ ಪೂರ್ವಭಾವಿ ಸಭೆ ನಡೆಯಲಿದ್ದು, ಸಾಧು ಲಿಂಗಾಯತ ಸಮಾಜದ ಎಲ್ಲಾ ಗುರು-ಹಿರಿಯರು, ಯುವಕರು, ಮಹಿಳೆಯರು ಈ ಸಭೆಯಲ್ಲಿ ಪಾಲ್ಗೊಳ್ಳಲು ತಾಲೂಕು ಸಾಧು ಲಿಂಗಾಯತ ಸಮಾಜದ ಅಧ್ಯಕ್ಷ ಗುಂಡಗತ್ತಿ ಮಂಜುನಾಥ ಬಂದೋಳ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದೆಹಲಿ ಮಾದರಿಯ ಪ್ರೀಮಿಯಂ ಬಸ್ ಸೇವೆ ಆರಂಭಿಸಿ, ಎಎಪಿ ಒತ್ತಾಯ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಬೆಂಗಳೂರಿನ ಟ್ರಾಫಿಕ್ ನಿಯಂತ್ರಿಸಲು ದೆಹಲಿ ಮಾದರಿ ಪ್ರೀಮಿಯಂ ಬಸ್ ಸೇವೆಯನ್ನು ರಾಜ್ಯದಲ್ಲಿ ಆರಂಭಿಸಬೇಕು ಎಂದು ಎಎಪಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ರಾಜ್ಯದ ಆಪ್ ಹಿರಿಯ ನಾಯಕ ಜಗದೀಶ್ ವಿ ಸೇಡಂ, ದೆಹಲಿ ಮಾದರಿಯನ್ನು ಬೆಂಗಳೂರಿನಲ್ಲಿ ಅನುಕರಿಸಬೇಕು ಎಂದು ಒತ್ತಾಯಿಸಿದ್ದಾರೆ. ಬೆಂಗಳೂರು ನಗರದ ಟ್ರಾಫಿಕ್ ಮತ್ತು ಮಾಲಿನ್ಯ ನಿಯಂತ್ರಣದ ದೃಷ್ಟಿಯಿಂದ ದೆಹಲಿ ಮಾದರಿಯ ಪ್ರೀಮಿಯಂ ಬಸ್‌ಗಳನ್ನು ಬೆಂಗಳೂರಿನಂತಹ ನಗರಗಳಲ್ಲಿ ಪ್ರಾರಂಭಿಸಬೇಕು ಎಂದು ಮನವಿ ಮಾಡಿದ್ದಾರೆ.

ಮೇಲ್ಮಧ್ಯಮ ವರ್ಗದವರನ್ನು ಸಾರ್ವಜನಿಕ ಸಾರಿಗೆಗೆ ಉತ್ತೇಜಿಸಲು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಶುಕ್ರವಾರ ಬಹು ನಿರೀಕ್ಷಿತ 'ಪ್ರೀಮಿಯಂ ಬಸ್ ಅಗ್ರಿಗೇಟರ್ ಪಾಲಿಸಿ 2023'ನ್ನು ಅನುಮೋದಿಸಿದ್ದಾರೆ. ಈ ಯೋಜನೆಯು ದೆಹಲಿಯ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸುತ್ತದೆ ಮತ್ತು ಸಂಚಾರ ಮತ್ತು ವಾಯು ಮಾಲಿನ್ಯವನ್ನು ಕಡಿಮೆ ಮಾಡುತ್ತದೆ ಎಂದು ಅವರು ಪತ್ರದಲ್ಲಿ ತಿಳಿಸಲಾಗಿದೆ.

# ಹುಲಿ ಉಗುರು ಪ್ರಕರಣ: ವರ್ತೂರು ಸಂತೋಷ್‌ಗೆ ಜಾಮೀನು ಮಂಜೂರು!

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಹುಲಿ ಉಗುರು ಧರಿಸಿದ್ದ ಪ್ರಕರಣ ಸಂಬಂಧ ಬಂಧನಕ್ಕೀಡಾಗಿದ್ದ 'ಬಿಗ್ ಬಾಸ್ ಕನ್ನಡ' ರಿಯಾಲಿಟಿ ಶೋ ಸ್ಪರ್ಧಿ ವರ್ತೂರು ಸಂತೋಷ್ ಗೆ ಜಾಮೀನು ಮಂಜೂರಾಗಿದೆ.

ಬೆಂಗಳೂರಿನ 2ನೇ ಎಸಿಜೆಎಂ ನ್ಯಾಯಾಲಯ ಜಾಮೀನು ನೀಡಿದೆ. ನಾಲ್ಕು ಸಾವಿರ ರೂಪಾಯಿ ನಗದು ಭದ್ರತೆ ಅಥವಾ ಒಬ್ಬರ ಶ್ಯೂರಿಟಿ ಒದಗಿಸುವಂತೆ ಷರತ್ತು ಹಾಕಲಾಗಿದೆ. ಇಂದು ಸಂಜೆ ವೇಳೆಗೆ ವರ್ತೂರು ಸಂತೋಷ್ ಬಿಡುಗಡೆ ಆಗುವ ಸಾಧ್ಯತೆ ಇದೆ. ವರ್ತೂರು ಸಂತೋಷ್ ಹಳ್ಳಿಕಾರ್ ತಳಿಯ ಹಸುಗಳ ಸಂರಕ್ಷಣೆ ಮಾಡುವ ಮೂಲಕ ಖ್ಯಾತಿ ಗಳಿಸಿದ್ದರು. ಅದೇ ಆಧಾರದಲ್ಲಿ ಅವರು ಬಿಗ್ ಬಾಸ್‌ಗೆ ಆಯ್ಕೆಯಾಗಿದ್ದರು. ಇನ್ನು ಬಿಗ್ ಬಾಸ್ ಮನೆಯಲ್ಲಿ ಸಂತೋಷ್ ಧರಿಸಿದ್ದ ಹುಲಿ ಉಗುರಿನ ಲಾಕೆಟ್ ವೈರಲ್ ಆಗಿತ್ತು. ಹೀಗಾಗಿ ಅರಣ್ಯಾಧಿಕಾರಿಗಳು ಅಕ್ಟೋಬರ್ 22ರ ರಾತ್ರಿ ಬಿಗ್ ಬಾಸ್ ಮನೆಗೆ ಹೋಗಿ ಅವರನ್ನು ಬಂಧಿಸಿದ್ದರು. ನಂತರ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.

ವರ್ತೂರ್ ಸಂತೋಷ್ ಪ್ರಕರಣ ಬೆನ್ನಲ್ಲೇ ರಾಜ್ಯಾದ್ಯಂತ ಹುಲಿ ಉಗುರು ಪ್ರಕರಣ ಸದ್ದು ಮಾಡಿತ್ತು. ಹಲವು ಸಿನಿಮಾ ನಟರು, ರಾಜಕೀಯ ನಾಯಕರು ಹುಲಿ ಉಗುರು ಧರಿಸಿರುವ ಫೋಟೋಗಳು ವೈರಲ್ ಆಗಿದ್ದು ಅವರ ಮನೆ ಮೇಲೆ ಅರಣ್ಯಾಧಿಕಾರಿಗಳು ದಾಳಿ ಮಾಡಿ ಪರಿಶೀಲನೆ ನಡೆಸಿ ಲಾಕೆಟ್‌ಗಳನ್ನು ವಶಕ್ಕೆ ಪಡೆದಿದ್ದಾರೆ.

# ಶ್ರೀ ಅನ್ನದಾನೇಶ್ವರ ಕಾಲೇಜಿನ ಕಟ್ಟಡದ ಭೂಮಿಪೂಜೆ



■ ವಿಜಯಸಾಕ್ಷಿ ಸುದ್ದಿ, ಗದಗ

ನಗರದಲ್ಲಿ ನೂತನವಾಗಿ ಆರಂಭವಾಗಲಿರುವ ಶ್ರೀ ಅನ್ನದಾನೇಶ್ವರ ಪದವಿಪೂರ್ವ ಕಾಲೇಜಿನ ಕಟ್ಟಡದ ಭೂಮಿಪೂಜೆ ಸಮಾರಂಭವನ್ನು ಇತ್ತೀಚೆಗೆ ಪೂಜ್ಯ ಶ್ರೀ ಜಗದ್ಗುರು ಮುಪ್ಪಿನ ಬಸವಲಿಂಗ ಸ್ವಾಮಿಗಳು, ಹಾಲಕೆರೆ ಇವರ ಅಮೃತ ಹಸ್ತದಿಂದ ನೆರವೇರಿಸಲಾಯಿತು.

ವಿಜಯ ದಶಮಿ ಶುಭದಿನದಂದು ಪೂಜೆ ನೆರವೇರಿಸಿ ಮಾತನಾಡಿದ ಶ್ರೀಗಳು, ಹಾಲಕೆರೆ ಶ್ರೀ ಅನ್ನದಾನೇಶ್ವರ ಮಠವು ಸ್ವಾತಂತ್ರ್ಯ ಸಿಗುವದಕ್ಕಿಂತ ಪೂರ್ವದಲ್ಲಿ ನರೇಗಲ್ಲನಲ್ಲಿ ಅನ್ನದಾಸೋಹ, ಅಕ್ಷರ ದಾಸೋಹದ ಮೂಲಕ ಅಸಂಖ್ಯಾತ ಬಡ ಮಕ್ಕಳಿಗೆ ದಾರಿದೀಪವಾಗಿದ್ದಾರೆ. ತಮ್ಮ ಗುರುಗಳ ಸಂಕಲ್ಪದಂತೆ ಗದಗ ನಗರದಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಆಧುನಿಕ ತಂತ್ರಜ್ಞಾನ ಬಳಸಿ ನಮ್ಮ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಉದ್ದೇಶದಿಂದ ಸಕಲ ಸೌಲಭ್ಯಗಳನ್ನು ಹೊಂದಿದ ಮಹಾವಿದ್ಯಾಲಯ ಶೀಘ್ರ ಆರಂಭವಾಗಲಿದೆ ಎಂದರು. ಪೂಜ್ಯ ಶ್ರೀ ಕೊಟ್ಟೂರ ಮಹಾಸ್ವಾಮಿಗಳು ಭೂಮಿಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಶ್ರೀ ಮಠದ ಶಿವಾನುಭವ ಸಮಿತಿ ಅಧ್ಯಕ್ಷ ಎಸ್.ಪಿ ಸಂಶಿಮಠ, ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ ದೊಡ್ಡಮೇಟಿ, ಆಡಳಿತಾಧಿಕಾರಿ ಎನ್.ಆರ್ ಗೌಡರ, ಶರಣೆ ರತ್ನಕ್ಕಾ ಪಾಟೀಲ, ಎಮ್.ಡಿ ಕಮತರ, ನಿವೃತ್ತ ಪ್ರಾಚಾರ್ಯ ಬಿ.ಎಫ್ ಚೇಗರೆಡ್ಡಿ, ವ್ಹಿ.ಕೆ ಗುರುಮಠ, ಪ್ರಾಚಾರ್ಯ ವಾಯ್.ಸಿ ಪಾಟೀಲ, ಪ್ರಾಚಾರ್ಯ ಎಮ್.ಸಿ ಕಟ್ಟಿಮನಿ, ಮುಖ್ಯೋಪಾಧ್ಯಾಯ ಎಸ್.ಎನ್ ಹೂಲಗೇರಿ, ಉಪನ್ಯಾಸಕರಾದ ಎನ್.ಎಸ್ ಹುಡೇದ, ವೀರಣ್ಣ ಹಳ್ಳಿ, ಮಲ್ಲಿಕಾರ್ಜುನ ಮೆಣಸಗಿ, ಸುರೇಶ ಅಂಗಡಿ, ವಿ.ಎ ಶಿವನಗೌಡರ, ಬಿ.ವಿ ಉಪ್ಪಿನ, ಎಮ್.ಎಮ್ ಕುಂಬಾರ, ಡಾ. ಹೊಸಮನಿ, ಜಯಶ್ರೀ ಇಳಕಲ್, ನಿವೃತ್ತ ಉಪನ್ಯಾಸಕ ಇಳಕಲ್, ಎಮ್.ಎಸ್ ಸಾಲಿಮಠ, ಶರಣಯ್ಯ ಮುಳಗುಂದಮಠ, ಬಸವರಾಜ ಇಂಜನಗೇರಿ, ಶ್ರೀ ಮಠದ ಸದ್ಭಕ್ತರು ಇದ್ದರು.

# ಜ.ತೋಂಟದಾರ್ಯ ಪ್ರೌಢಶಾಲೆ ಕಟ್ಟಡಕ್ಕೆ ಭೂಮಿಪೂಜೆ



■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಜ. ತೋಂಟದಾರ್ಯ ವಿದ್ಯಾಪೀಠದ ನಿವೇಶನದಲ್ಲಿ ಪೂಜ್ಯ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರ 5ನೇ ಪುಣ್ಯಸ್ಮರಣೋತ್ಸವದ ಅಂಗವಾಗಿ ತೋಂಟದಾರ್ಯ ಕನ್ನಡ ಮಾಧ್ಯಮ ಪ್ರೌಢಶಾಲೆಯ ನೂತನ ಕಟ್ಟಡದ ಶಂಕು ಸ್ಥಾಪನೆಯನ್ನು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿಯವರು ನೆರವೇರಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಸಚಿವ ಎಚ್.ಕೆ ಪಾಟೀಲ ವಹಿಸಿದ್ದರು. ಜಗದ್ಗುರು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಸಾನಿಧ್ಯ ವಹಿಸಿ ಮಾತನಾಡಿ, ಜಗದ್ಗುರು ತೋಂಟದಾರ್ಯ ಶಾಲೆಯು ಪೂಜ್ಯ ಲಿಂಗೈಕ್ಯ ಶ್ರೀಗಳು ಸ್ಥಾಪಿಸಿದ ಮೊದಲ ಶಾಲೆಯಾಗಿದೆ. ಇಂದು ಶಾಲೆಯಲ್ಲಿ ಮಕ್ಕಳ ಸಂಖ್ಯೆ ಅಧಿಕವಾಗಿರುವುದರಿಂದ ನೂತನ ಕಟ್ಟಡದ ಶಂಕುಸ್ಥಾಪನೆಯನ್ನು ಪೂಜ್ಯರ ಪುಣ್ಯಸ್ಮರಣೆಯ ಅಂಗವಾಗಿ ನೆರವೇರಿಸಿರುವುದು ಲಿಂಗೈಕ್ಯ ಶ್ರೀಗಳ ಸಮಾಜಮುಖಿ ಕಾರ್ಯದ ಒಂದು ಭಾಗವಾಗಿದೆ ಎಂದರು. ಭೈರನಹಟ್ಟಿಯ ಶಾಂತಲಿಂಗ ಮಹಾಸ್ವಾಮಿಗಳು, ಆಳಂದದ ತೋಂಟದಾರ್ಯ ಅನುಭವ ಮಂಟಪದ ಕೋರಣೇಶ್ವರ ಮಹಾಸ್ವಾಮಿಗಳು ಸಮ್ಮುಖ ವಹಿಸಿದ್ದರು. ಈ ಸಂದರ್ಭದಲ್ಲಿ ಮಾಜಿ ಸಚಿವ ಎಸ್.ಎಸ್ ಪಾಟೀಲ, ಮಾಜಿ ಶಾಸಕ ಡಿ.ಆರ್ ಪಾಟೀಲ, ಲೋಕಸಭಾ ಮಾಜಿ ಸದಸ್ಯ ಐ.ಜಿ ಸನದಿ, ಗೃಹ ಇಲಾಖೆಯ ನಿವೃತ್ತ ಕಾರ್ಯದರ್ಶಿ ಡಾ. ಎಸ್.ಎಂ ಜಾಮದಾರ, ಖ್ಯಾತ ಮನೋರೋಗ ತಜ್ಞ ಡಾ. ಆನಂದ ಪಾಂಡುರಂಗಿ, ಜ.ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿ ಎಸ್.ಎಸ್ ಪಟ್ಟಣಶೆಟ್ಟರ, ಮೃತ್ಯುಂಜಯ ಸಂಕೇಶ್ವರ, ಗಂಗಾಧರ ಹಿರೇಮಠ, ಅಮರೇಶ ಅಂಗಡಿ, ಬಾಲಚಂದ್ರ ಭರಮಗೌಡ್ರ, ಲಿಂಗರಾಜ ಪಾಟೀಲ, ಗುರು ತಡಸದ, ಶೇಖಣ್ಣ ಕಳಸಾಪೂರ, ಡಾ. ಎಸ್.ಬಿ ಶೆಟ್ಟರ, ಪ್ರಾಚಾರ್ಯ ಶಶಿಧರ ತೋಡಕರ, ಮುಖ್ಯೋಪಾಧ್ಯಾಯ ಕೊಟ್ರೇಶ ಮೆಣಸಿನಕಾಯಿ ಮುಂತಾದವರು ಉಪಸ್ಥಿತರಿದ್ದರು.

## ಬಿಲ್ವಪತ್ರೆ ವನವನ್ನು ಲೋಕಾರ್ಪಣೆಗೊಳಿಸಿದ ಜ. ಮುಪ್ಪಿನ ಬಸವಲಿಂಗ ಶ್ರೀಗಳ ಅಭಿಮತ

# ಬಿಲ್ವವನದ ಶ್ರೇಯಸ್ಸು ಭಕ್ತರಿಗೆ ಸಲ್ಲುತ್ತದೆ



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಭವರೋಗ ವೈದ್ಯರಾಗಿ, ಲಿಂಗಪೂಜಾನುಷ್ಠಾನಗೈದ ನಿಡಗುಂದಿಕೊಪ್ಪದ ಶ್ರೀ ಚನ್ನಬಸವ ಶ್ರೀಗಳವರ ಸಮಾಜಮುಖಿ ಸೇವೆ ಎಂದಿಗೂ ಅನುಕರಣೀಯ. ಏನೂ ಇಲ್ಲದ ಶ್ರೀಮಠವನ್ನು ಹಾನಗಲ್ಲ ಕುಮಾರ ಮಹಾಸ್ವಾಮಿಗಳವರ ಮತ್ತು ಹಾವೇರಿಯ ಶ್ರೀ ಶಿವಬಸವ ಮಹಾಸ್ವಾಮಿಗಳವರ ಅಪ್ಪಣೆಯಂತೆ ನಾಡಿನಲ್ಲಿ ಮುಂಚೂಣಿಗೆ ತಂದು ನಿಲ್ಲಿಸಿದ್ದಾರೆ ಎಂದು ಹಾಲಕೆರೆಯ ಜ. ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳವರು ಹೇಳಿದರು.

ಅವರು ನಿಡಗುಂದಿ ಗ್ರಾಮದಲ್ಲಿ ಭೂದಾನಿ ಶಾಂತವ್ವ ವೀರಪ್ಪ ಅಣಗೌಡ್ರರು ದಾನ ನೀಡಿರುವ ಜಮೀನಿನಲ್ಲಿ ನಿಡಗುಂದಿಕೊಪ್ಪದ ಶ್ರೀಗಳವರು ನೂತನವಾಗಿ ನಿರ್ಮಿಸಿರುವ ಬಿಲ್ವಪತ್ರೆ ವನವನ್ನು ಲೋಕಾರ್ಪಣೆಗೊಳಿಸಿ, ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡುತ್ತಿದ್ದರು.

ನಿಡಗುಂದಿಕೊಪ್ಪದ ಅಭಿನವ ಚನ್ನಬಸವ ಮಹಾಸ್ವಾಮಿಗಳವರು ಆಶೀರ್ವಚನ ನೀಡಿ, ಇಂದು ಲೋಕಾರ್ಪಣೆಗೊಂಡಿರುವ ಪತ್ರೆವನ ಹಾನಗಲ್ಲ ಕುಮಾರೇಶ್ವರರ ಮತ್ತು ಹಾವೇರಿಯ ಶಿವಬಸವ ಮಹಾಸ್ವಾಮಿಗಳ ಆಶೀರ್ವಾದದಿಂದ ಸಾಧ್ಯವಾಗಿದೆ. ಈವರೆಗೆ ನನಗೆ ಸಂದಿರುವ 237 ತುಲಾಭಾರಗಳ ಸೇವೆಯನ್ನು ನಾನು ದಾಸೋಹಕ್ಕೆ ಮೀಸಲಿಟ್ಟಿದ್ದೇನೆ. ಈ ವನವು ಎಲ್ಲ ಭಕ್ತರ ಸಹಾಯ-ಸಹಕಾರಗಳಿಂದ ನಿರ್ಮಾಣವಾಗಿದೆ. ಇದರ ಶ್ರೇಯಸ್ಸು ಭಕ್ತರಿಗೆ ಸಲ್ಲುತ್ತದೆ ಎಂದರು.

ಕಳಸಾರೋಹಣ ನೆರವೇರಿಸಿ, ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹಾವೇರಿ ಹುಕ್ಕೇರಿ ಮಠದ ಸದಾಶಿವ ಮಹಾಸ್ವಾಮಿಗಳು ಆಶೀರ್ವಚನ ನೀಡಿ, ಹಾವೇರಿಯ ಶಿವಬಸವ ಮಹಾಸ್ವಾಮಿಗಳವರು ಮಹಾನ್ ತಪಸ್ವಿಗಳು. ಹಾನಗಲ್ಲ ಕುಮಾರೇಶ್ವರರ ಮತ್ತು ಹಾವೇರಿ ಶಿವಬಸವ ಮಹಾಸ್ವಾಮಿಗಳವರ ತಪಾನುಷ್ಠಾನ ಇಂದು ಇಲ್ಲಿ ಸಾಕಾರಗೊಂಡಿದೆ. ಪತ್ರೆವನವು ಮನುಷ್ಯನ ತಾಪವನ್ನು ದೂರ ಮಾಡುವ ಗುಣವನ್ನು ಹೊಂದಿದೆ. ಲೌಕಿಕ ಜೀವನಕ್ಕೆ ಹೆಚ್ಚಿನ ಮಹತ್ವ ನೀಡುವ ಬದಲಾಗಿ ಇಂತಹ ಧಾರ್ಮಿಕ ಕಾರ್ಯಗಳೆಡೆಗೆ ನಿಮ್ಮ ಮನಸ್ಸನ್ನು ತಿರುಗಿಸಿರಿ ಎಂದರು.

ವೇದಿಕೆಯ ಮೇಲೆ ಮಣಕವಾಡದ ಅಭಿನವ ಮೃತ್ಯುಂಜಯ ಮಹಾಸ್ವಾಮಿಗಳು, ಅಂಕಲಗಿಯ ಅಡವಿ ಸಿದ್ದರಾಮ ಮಹಾಸ್ವಾಮಿಗಳು, ಯಲಬುರ್ಗಾದ ಶಿದ್ದರಾಮ ಶಿವಾಚಾರ್ಯರು, ಹೊಸಪೇಟೆಯ ಚಂದ್ರಶೇಖರ ದೇವರು, ನಿಡಗುಂದಿ ಭೀಮಾಂಬಿಕಾ ಮಠದ ಷಣ್ಮುಖಪ್ಪಜ್ಜನವರು ಸೇರಿದಂತೆ ಹರ-ಗುರು-ಚರ ಮೂರ್ತಿಗಳು ಉಪಸ್ಥಿತರಿದ್ದರು.

ನಿಡಗುಂದಿಯ ಸಿದ್ದಲಿಂಗಶಾಸ್ತ್ರಿಗಳು ಗುಡದೂರಕಲ್ಮಠ ಆಶಯ ನುಡಿಗಳನ್ನು ನುಡಿದರು. ರೋಣ ಪುರಸಭೆಯ ಉಪಾಧ್ಯಕ್ಷ ಮಿಥುನ ಪಾಟೀಲ ಸಮಾರಂಭವನ್ನುದ್ದೇಶಿಸಿ ಮಾತನಾಡಿದರು. ವೇದಿಕೆಯ ಮೇಲೆ ನಿವೃತ್ತ ಶಿಕ್ಷಕ ಎಂ.ಎ ಹಿರೆವಡೇಯರ, ಡಾ. ಆರ್.ಕೆ ಗಚ್ಚಿನಮಠ, ಸರ್ವಿ, ಅಂದಪ್ಪ ಬಿಚ್ಚೂರ, ಜಗದೀಶ ಕರಡಿ, ಮಲ್ಲಪ್ಪ ಬಿಚ್ಚೂರ ಮುಂತಾದ ಗಣ್ಯರಿದ್ದರು. ದೇವೀರಪ್ಪ ಬಡಿಗೇರ ನಿರೂಪಿಸಿದರು. ಆರ್.ವಿ ಬೆಲ್ಲದ ವಂದಿಸಿದರು.

> ವೀರಶೈವ ಲಿಂಗಾಯತ ಸಮಾಜ ಮುನ್ನೆಲೆಗೆ ಬರುವಲ್ಲಿ ಹಾನಗಲ್ಲ ಕುಮಾರ ಮಹಾಸ್ವಾಮಿಗಳ ಕಾಣಿಕೆ ದೊಡ್ಡದಿದೆ. ಸ್ವತಃ ಆಯುರ್ವೇದ ವೈದ್ಯರಾಗಿದ್ದ ಕುಮಾರಸ್ವಾಮಿಗಳು ತೊನ್ನು ರೋಗಕ್ಕೆ ಸಂಪೂರ್ಣ ಚಿಕಿತ್ಸೆಯನ್ನು ಕಂಡುಹಿಡಿದ ಮೊದಲಿಗರಾಗಿದ್ದಾರೆ. ಅದೇ ವಿದ್ಯೆಯನ್ನು ಚನ್ನಬಸವ ಮಹಾಸ್ವಾಮಿಗಳವರಿಗೆ ಕಲಿಸಿ ಅವರನ್ನೂ ದೊಡ್ಡ ವೈದ್ಯರನ್ನಾಗಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.
>
> **– ಜ. ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು.**


ಕರ್ನಾಟಕ ಸರ್ಕಾರ

**ಜಿಲ್ಲಾಧಿಕಾರಿಗಳ ಕಾರ್ಯಾಲಯ, (ಜಿಲ್ಲಾ ನಗರಾಭಿವೃದ್ಧಿ ಕೋಶ)**
**ಕೊಠಡಿ ಸಂಖ್ಯೆ. 123, ಜಿಲ್ಲಾಡಳಿತ ಭವನ, ಗದಗ-582101**
**Ph & Fax : 08372-231877, Email : dudc_gdg@yahoo.co.in**

ನಂ.ಜಿನಕೋ/ಇಇ/ವಾಹನಬಾಡಿಗೆ/ವಹಿ/38/2023-24 ದಿನಾಂಕ:27-10-2023

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಜಿಲ್ಲಾಧಿಕಾರಿಗಳ ಕಾರ್ಯಾಲಯದ ಜಿಲ್ಲಾ ನಗರಾಭಿವೃದ್ಧಿ ಕೋಶ ಗದಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು-1 & 2 ಅಭಿಯಂತರರುಗಳಿಗೆ ಸರ್ಕಾರಿ ಕೆಲಸ ಕಾರ್ಯಗಳಿಗಾಗಿ ಖಾಸಗಿ ವಾಹನವನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪೂರೈಸಲು ಕೆ.ಟಿ.ಪಿ.ಪಿ. ಅಧಿನಿಯಮ 1999 ನಿಯಮ 2000 ರನ್ವಯ ಹಾಗೂ ತಿದ್ದುಪಡಿ ಅಧಿನಿಯಮ 2018ರನ್ವಯ (1) ಇಂಡೆಂಟ್ ನಂಬರ DMA/2023-24/SE1100 (2) ಇಂಡೆಂಟ್ ನಂಬರ DMA/2023-24/SE1103 (3) ಇಂಡೆಂಟ್ ನಂಬರ DMA/2023-24/SE1104 ರಲ್ಲಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಿದ್ದು, ಅರ್ಹ ಬಿಡ್ಡದಾರರು **KPP Portal at https://kppp.karnataka.gov.in** ನಲ್ಲಿ ಠೇವಣಿ (ಇ.ಎಂ.ಡಿ.) ಮತ್ತು ಟೆಂಡರ್ ಫೀಯನ್ನು ಸೂಚಿಸಿದಂತೆ ಪಾವತಿಸಿಬಹುದಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ : **04-11-2023** 17.00 ಗಂಟೆಯವರೆಗೆ, ಟೆಂಡರನ ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ : **06-11-2023**, 11.00 ಗಂಟೆಗೆ ಟೆಂಡರ್ ದಿನಾಂಕವನ್ನು ನಿಗದಿಪಡಿಸಲಾಗಿದೆ. ಟೆಂಡರಿಗೆ ಸಂಬಂಧಿಸಿದ ಯಾವುದೇ ಬದಲಾವಣೆಯು ಹಾಗೂ ತಿದ್ದುಪಡೆಗೆ **KPP Portal** ನಲ್ಲಿ ಪ್ರಕಟಿಸಲಾಗುವುದು. ಯಾವುದೇ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ.

**ಸಹಿ/- ಯೋಜನಾ ನಿರ್ದೇಶಕರು,**
ವಾಸಾಸಂಇ/ಗದಗ/ಕೆಎಸ್‌ಎಂಸಿಎ/276/23-24 **ಜಿಲ್ಲಾ ನಗರಾಭಿವೃದ್ಧಿ ಕೋಶ, ಗದಗ**

# ಬೌದ್ಧ ದೀಕ್ಷೆ ಪಡೆದ ಬಿನ್ನಾಳ ಕುಟುಂಬ




■ ವಿಜಯಸಾಕ್ಷಿ ಸುದ್ದಿ, ಗದಗ

ಕಳೆದ 50 ವರ್ಷಗಳಿಂದ ನಿರಂತರವಾಗಿ ಪ್ರತಿವರ್ಷ ಲಕ್ಷ ಲಕ್ಷ ಸಂಖ್ಯೆಯಲ್ಲಿ ಡಾ. ಅಂಬೇಡ್ಕರವರ ಅನುಯಾಯಿಗಳು ಬೌದ್ಧ ಧಮ್ಮ ಸ್ವೀಕಾರ ಮಾಡುತ್ತಿದ್ದಾರೆ. ಈ ಮೂಲಕ ಭಾರತವನ್ನು ಬೌದ್ಧ ಭಾರತವನ್ನಾಗಿ ಮಾಡಲು ಹೊರಟಿದ್ದಾರೆ. ಇದೇ ಹಿನ್ನೆಲೆಯಲ್ಲಿ ಗದಗ ಅಂಬೇಡ್ಕರ ನಗರದ ನಿವಾಸಿಗಳಾದ ಆಯುಷ್ಮಾನ ರಾಘು ಬಿನ್ನಾಳ, ಆಯುಷ್ಮತಿ ಮಧುಮತಿ ಬಿನ್ನಾಳ ಸೇರಿದಂತೆ ಅವರ ಮಕ್ಕಳಾದ ದೃಷಿಕಾ ಮತ್ತು ಗಾಯನ ಅವರು ನಾಗಪುರದಲ್ಲಿ ಸಂಘಪಾಲ್ ಭಂತೇಜಿ ಅವರ ಸಮ್ಮುಖದಲ್ಲಿ ಬೌದ್ಧ ಧಮ್ಮ ಸ್ವೀಕಾರ ಮಾಡಿದರು. ಧಮ್ಮ ಸ್ವೀಕಾರ ಮಾಡುವ ಮೂಲಕ ಡಾ. ಬಾಬಾ ಸಾಹೇಬ ಅಂಬೇಡ್ಕರವರು ಹೇಳಿದ 22 ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದರು. ಈ ಸಂದರ್ಭದಲ್ಲಿ ಗದಗನಿಂದ ನಾಗಪುರ ದೀಕ್ಷಾ ಭೂಮಿಗೆ 150ಕ್ಕೂ ಹೆಚ್ಚು ಜನ ತೆರಳಿದ್ದರು. ಈ ಸಂದರ್ಭದಲ್ಲಿ ಜಿಲ್ಲೆಯ ದಲಿತ ಮುಖಂಡರಾದ ಆನಂದ ಶಿಂಗಾಡಿ, ಶರೀಪ ಬಿಳೆಯಲಿ, ಮುತ್ತು ಬಿಳೆಯಲಿ, ಶಿವಾನಂದ ತಮ್ಮಣ್ಣವರ, ಯಲ್ಲಪ್ಪ ರಾಮಗಿರಿ, ಮಲ್ಲೇಶ ಹೊಸಮನಿ, ಸಾಹಿತಿಗಳಾದ ಡಾ. ರಾಮಚಂದ್ರ ಹಂಸನೂರ, ಬಸವರಾಜ ಬೇವಿನಮರದ, ಬಸವರಾಜ ಛಲವಾದಿ, ಅನಿಲ ಕಾಳೆ, ಪರಶು ಕಾಳೆ, ಬಸವರಾಜ ಬಿಳೆಯಲಿ, ಹುಚ್ಚಪ್ಪ ಛಲವಾದಿ, ದೇವಪ್ಪ ಛಲವಾದಿ, ಕೇಶವ ಕಟ್ಟಿಮನಿ, ಮಂಜುನಾಥ ಗೊಂದಿ, ಅಡಿವೆಪ್ಪ ಹೊಸಮನಿ ಹಾಗೂ ಡೋಣಿ ಗ್ರಾಮದ ಅಂಬೇಡ್ಕರವರ ಅನುಯಾಯಿಗಳು ಉಪಸ್ಥಿತರಿದ್ದರು.

# ನಿಯಮಿತ ದೈಹಿಕ ಚಟುವಟಿಕೆ ಅತ್ಯಗತ್ಯ



■ ವಿಜಯಸಾಕ್ಷಿ ಸುದ್ದಿ, ಗದಗ

ಇತ್ತಿಚೀನ ದಿನಗಳಲ್ಲಿ ಮೂಳೆಯ ರೋಗಗಳಾದ ಅಸ್ಥಿರಂಧ್ರತೆ ಮತ್ತು ಸವಕಳಿ ಪ್ರಕರಣಗಳು ಮಧ್ಯವಯಸ್ಕರಲ್ಲಿ ಕಂಡು ಬರುತ್ತಿದ್ದು, ಇದನ್ನು ತಡೆಗಟ್ಟಲು ಉತ್ತಮ ಆಹಾರ ಸೇವನೆ ಹಾಗೂ ದೈಹಿಕ ಚಟುವಟಿಕೆಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಲು ಡಾ. ಪ್ರಕಾಶ ಸಂಕನೂರ ಕರೆ ನೀಡಿದರು. ಅವರು ಸಂಕನೂರ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಕಾಲೇಜು ಮತ್ತು ಸಂಕನೂರ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ಇವರ ಸಹಯೋಗದಲ್ಲಿ ಹಮ್ಮಿಕೊಂಡ ಅಸ್ಥಿರಂಧ್ರತೆ ಮತ್ತು ಸಂಧೀವಾತದ ಕುರಿತು ಜಾಗೃತಿ ಕಾಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇತ್ತೀಚೆಗೆ 100ರಲ್ಲಿ 60ರಷ್ಟು ಮಧ್ಯವಯಸ್ಕರಿಗೆ ಸಂಧಿವಾತ, ಮೂಳೆಗಳ ಸವಕಳಿ ಸಮಸ್ಯೆಗಳು ಬರುತ್ತಿದ್ದು, ಅದಕ್ಕೆ ನಿಯಮಿತ ದೈಹಿಕ ಚಟುವಟಿಕೆ ಹಾಗೂ ಪೌಷ್ಟಿಕ ಆಹಾರ ಸೇವನೆ ಮಾಡದೇ ಇರುವುದು ಕಾರಣ ಎಂದು ತಿಳಿಸಿದರು.

ನರ್ಸಿಂಗ್ ಕಾಲೇಜಿನ ಪ್ರಾಚಾರ್ಯೆ ಮೀನಾಕ್ಷಿ ದೇವಾಂಗಮಠ ಮಾತನಾಡಿ, ಇಂದಿನ ಜನಾಂಗವು ಫಾಸ್ಟ್‌ಫುಡ್ ಅಥವಾ ಜಂಕ್‌ಫುಡ್ ತಿಂದು ಮಧ್ಯ ವಯಸ್ಸಿನಲ್ಲಿಯೇ ಮೂಳೆಗಳ ರೋಗಕ್ಕೆ ತುತ್ತಾಗುತ್ತಿದ್ದಾರೆ. ಇಂತಹ ಆಹಾರ ಸೇವನೆ ವರ್ಜಿಸಿ, ಪೌಷ್ಟಿಕಯುಕ್ತ ಆಹಾರ ಸೇವನೆ, ದಿನನಿತ್ಯ ಯೋಗ, ವ್ಯಾಯಾಮ ಹಾಗೂ ದೈಹಿಕ ಚಟುವಟಿಕೆಗಳಲ್ಲಿ ನಿರತರಾಗಿರುವುದರಿಂದ ಮೂಳೆ ಸಂಬಂಧಿಸಿದ ರೋಗದಿಂದ ದೂರ ಉಳಿಯಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಡಾ. ರಾಜೇಶ ಜನ್ನಾ, ಸಂಕನೂರ ಕಾಲೇಜಿನ ಆಡಳಿತಾಧಿಕಾರಿ ವಿನ್ಸೆಂಟ್ ಪಾಟೀಲ, ಕಾಲೇಜಿನ ಅಧ್ಯಾಪಕರು ಉಪಸ್ಥಿತರಿದ್ದರು. ರಶ್ಮಿ ಪಾಟೀಲ ಸ್ವಾಗತಿಸಿದರು. ಭಾಗ್ಯಲಕ್ಷ್ಮಿ ಅಂಗಡಿ ನಿರೂಪಿಸಿದರು. ವಿದ್ಯಾರ್ಥಿ ಗುರುಕಿರಣ ನಿಗಾಡೆ ವಂದಿಸಿದರು.

# ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸಿ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

6ರಿಂದ 16 ವರ್ಷದ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸಿ ಎಂದು ಗದಗ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ ನಡುವಿನಮನಿ ಹೇಳಿದರು.

ಅವರು ಪಟ್ಟಣದಲ್ಲಿ ಸತತವಾಗಿ ಶಾಲೆಗೆ ಗೈರಾದ ಮಕ್ಕಳ ಮನೆ ಮನೆಗೆ ತೆರಳಿ ಸಮೀಕ್ಷೆ ನಡೆಸಿ ಪಾಲಕರೊಂದಿಗೆ ಮಾತನಾಡಿ, 2009ರಲ್ಲಿ ಮಕ್ಕಳ ಹಕ್ಕು ಕಾಯ್ದೆ ಪ್ರಕಾರ 6ರಿಂದ 16 ವರ್ಷದ ಮಕ್ಕಳು ಕಡ್ಡಾಯವಾಗಿ ಶಿಕ್ಷಣ ಪಡೆಯಬೇಕು. ಈ ಉದ್ದೇಶದಿಂದ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ರಾಜ್ಯ ಹಾಗೂ ಕೇಂದ್ರ ಸರಕಾರದ ಉದ್ದೇಶ ಯಾವ ಮಗುವೂ ಶಿಕ್ಷಣದಿಂದ ವಂಚಿತರಾಗದೇ ಸಮಗ್ರ ಶಿಕ್ಷಣ ಪಡೆಯಬೇಕು. ಆ ದಿಸೆಯಲ್ಲಿ ಸರಕಾರಿ ಶಾಲೆಗಳಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸಲಾಗಿದೆ ಎಂದರು.

ವಿದ್ಯಾರ್ಥಿಗಳಿಗೆ ಸಮವಸ್ತ್ರ, ಪಠ್ಯ ಪುಸ್ತಕ, ಬಿಸಿಊಟ, ಕ್ಷೀರಭಾಗ್ಯ, ಶಿಷ್ಯವೇತನ ಹೀಗೆ ಹಲವಾರು ಯೋಜನೆಗಳ ಮೂಲಕ ಪ್ರತಿಯೊಬ್ಬರೂ ಶಿಕ್ಷಣವಂತರಾಗಬೇಕು ಎಂಬುದಕ್ಕೆ ಶಿಕ್ಷಣ ಇಲಾಖೆ ಅಕ್ಟೋಬರ್ 26ರಿಂದ ನವೆಂಬರ್ 4ರವರೆಗೆ ಸತತವಾಗಿ ಶಾಲೆ ಬಿಟ್ಟ ಮಕ್ಕಳ ಸಮೀಕ್ಷೆ ನಡೆಸುತ್ತಿದ್ದು, ಸಾರ್ವಜನಿಕರು ಹಾಗೂ ಪಾಲಕರು ಸತತವಾಗಿ ಶಾಲೆ ಬಿಟ್ಟು ಹೊರಗುಳಿದ ಮಕ್ಕಳ ಶಿಕ್ಷಣಕ್ಕಾಗಿ ಶಿಕ್ಷಣ ಇಲಾಖೆಯೊಂದಿಗೆ ಕೈಜೋಡಿಸಬೇಕು ಎಂದರು.

ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಧಾನ ಗುರು ಎ.ಸಿ ಶ್ಯಾಗೋಟಿ, ಎಸ್.ಎನ್ ಮಡ್ಡಿಕಾರ, ಜೆ.ಎನ್ ಜವಳಿ, ಎಸ್‌ಡಿಎಂಸಿ ಸದಸ್ಯ ಎ.ಶೇಖ ಇದ್ದರು.



## ಬಿ.ಎಡ್ ವಿದ್ಯಾರ್ಥಿಗಳ ತರಬೇತಿ ಕಾರ್ಯಾಗಾರದಲ್ಲಿ ಜಿ.ಎಂ ಮುಂದಿನಮನಿ ಮಾಹಿತಿ

# 'ರಾಜ್ಯ ಶೈಕ್ಷಣಿಕ ಸಾಧನ ಸಮೀಕ್ಷೆ –2023'

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ದೇಶಾದ್ಯಂತ ವಿಧದ ಆಯ್ದ ಶಾಲೆಗಳಲ್ಲಿ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಒರೆಗೆ ಹಚ್ಚುವ ಉದ್ದೇಶದಿಂದ ಕೇಂದ್ರ ಶಿಕ್ಷಣ ಸಚಿವಾಲಯ ಮತ್ತು ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿಯು (ಎನ್‌ಸಿಇಆರ್‌ಟಿ) ನವಂಬರ್ 3ರಂದು 'ರಾಜ್ಯ ಶೈಕ್ಷಣಿಕ ಸಾಧನ ಸಮೀಕ್ಷೆ –2023' (ಎಸ್‌ಇಎಎಸ್) ಹಮ್ಮಿಕೊಂಡಿದೆ. ಇದರ ಅಡಿಯಲ್ಲಿ ಲಕ್ಷ್ಮೇಶ್ವರ ಹಾಗೂ ಶಿರಹಟ್ಟಿ ತಾಲೂಕುಗಳ 80 ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎಂ ಮುಂದಿನಮನಿ ಮಾಹಿತಿ ನೀಡಿದರು.



ಅವರು ಲಕ್ಷ್ಮೇಶ್ವರದ ಶ್ರೀ ಸಹಸ್ರಾರ್ಜುನ ಬಿಎಡ್ ಪದವಿ ಮಹಾವಿದ್ಯಾಲಯದಲ್ಲಿ ಬಿಇಓ ಕಾರ್ಯಾಲಯ ಶಿರಹಟ್ಟಿಯ ವತಿಯಿಂದ ಹಮ್ಮಿಕೊಳ್ಳಲಾದ ರಾಜ್ಯ ಶೈಕ್ಷಣಿಕ ಸಾಧನ ಸಮೀಕ್ಷೆಯ ಕ್ಷೇತ್ರ ಪರಿವೀಕ್ಷಕರಾಗಿ ಆಯ್ಕೆಯಾದ ಬಿ.ಎಡ್ ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಡಯಟ್ ಉಪನ್ಯಾಸಕ ಜಿ.ಡಿ ದಾಸರ, ಕಾಲೇಜಿನ ಪ್ರಾಚಾರ್ಯ ಎಂ.ಎನ್ ಹಲವಾಗಲಿ, ಹಿರಿಯ ಉಪನ್ಯಾಸಕ ಆರ್.ಎಂ ಅಂಗಡಿ ವೇದಿಕೆಯಲ್ಲಿ ಉಪಸ್ಥಿತರಿದ್ದು ಮಾತನಾಡಿದರು. ಪ್ರೌಢ ವಿಭಾಗದ ಬಿಆರ್‌ಪಿ ಈಶ್ವರ ಮೆಡ್ಲೇರಿ ಪ್ರಾಸ್ತಾವಿಕ ನುಡಿಗಳನ್ನಾಡಿ, ಬಿಎಡ್ ಪ್ರಶಿಕ್ಷಣಾರ್ಥಿಗಳಿಗೆ ತರಬೇತಿ ನೀಡಿದರು.

ಕಾಲೇಜಿನ ಆಡಳಿತ ಮಂಡಳಿಯ ಕಾರ್ಯದರ್ಶಿ ಕೃಷ್ಣ ಖೋಡೆ, ಪದವಿ ಕಾಲೇಜಿನ ಪ್ರಾಚಾರ್ಯ ಶಂಭುಲಿಂಗ ಹೊಸಳ್ಳಿಮಠ, ಇಸಿಓ ಉಮೇಶ ಹುಚ್ಚಯ್ಯನಮಠ ಉಪಸ್ಥಿತರಿದ್ದರು. ಕಾಲೇಜಿನ ಉಪನ್ಯಾಸಕ ಜಿ.ಜಿ ಹುಬ್ಬಳ್ಳಿ ಸ್ವಾಗತಿಸಿದರು. ಲಕ್ಷ್ಮೇಶ್ವರ ಉತ್ತರ ವಲಯದ ಸಿಆರ್‌ಪಿ ಉಮೇಶ ನೇಕಾರ ನಿರೂಪಿಸಿದರು. ಬಿಆರ್‌ಪಿ ವಾಸು ದೀಪಾಲಿ ವಂದಿಸಿದರು.

ಬಿ.ಎಡ್ ಪ್ರಶಿಕ್ಷಣಾರ್ಥಿ ಎಲ್ಲಮ್ಮ ಗುಳ್ಳನ್ನವರ ಪ್ರಾರ್ಥಿಸಿದರು. ಉರ್ದು ಸಿಆರ್‌ಪಿ ಎನ್.ಎ ಮುಲ್ಲಾ ಹಾಗೂ ಕಾಲೇಜಿನ ಉಪನ್ಯಾಸಕರು ಉಪಸ್ಥಿತರಿದ್ದರು. ರಾಷ್ಟ್ರಮಟ್ಟದ ಈ ಸಮೀಕ್ಷೆಯ ಕ್ಷೇತ್ರ ಪರಿವೀಕ್ಷಕರಾಗಿ ಆಯ್ಕೆಯಾದ 80 ಬಿ.ಎಡ್ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಡಯಟ್ ಉಪನ್ಯಾಸಕ ಕೆ.ಪಿ ಸಾಲಿಮಠ ಮಾತನಾಡಿ, ಸರಕಾರಿ-ಅನುದಾನಿತ ಹಾಗೂ ಅನುದಾನರಹಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ 3, 6 ಹಾಗೂ 9ನೇ ತರಗತಿಗಳ ವಿದ್ಯಾರ್ಥಿಗಳಿಗಾಗಿ ಈ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

# ದರಪಟ್ಟಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಸಾರ್ವಜನಿಕ ಶಿಕ್ಷಣ ಇಲಾಖೆಗೆ ಪ್ರಸಕ್ತ ಸಾಲಿಗೆ ಆರ.ಬಿ.ಎಸ್.ಕೆ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಆರೋಗ್ಯ ತಪಾಸಣಾ ತಂಡಕ್ಕೆ ಅವಶ್ಯವಿರುವ ಸಾಧನ ಸಲಕರಣೆ ಖರೀದಿಸಲು ದರ ಪಟ್ಟಿಗಳನ್ನು ಆಹ್ವಾನಿಸಲಾಗಿದೆ. ದರಪಟ್ಟಿಗಳನ್ನು ದಿ. 05–11–2023 ರೊಳಗಾಗಿ ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ ಗದಗ. ಕಚೇರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ 08372–220644ಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದೆ.



ಮಾಜಿ ಸಚಿವರು ಹಾಗೂ ಧಾರವಾಡ ಗ್ರಾಮೀಣ ಭಾಗದ ಶಾಸಕರಾದ ವಿನಯ್ ಕುಲಕರ್ಣಿ ಅವರನ್ನ ಸೌಜನ್ಯದ ಬೇಟಿಯಾಗಿ ಕುಶಲೋಪರಿಯನ್ನ ಹಂಚಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಡಾ. ಬಸವರಾಜ ಧಾರವಾಡ, ಯುವ ಉದ್ಯಮಿ ವಿಜಯ ಹಬೀಬ್, ಪ್ರಭು ಧಾರವಾಡ್ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ಭೂತಾಯಿಗೆ ಚರಗ ಚೆಲ್ಲಿ ಸಂಭ್ರಮಿಸಿದ ರೈತರು



■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಮುಂಗಾರು, ಹಿಂಗಾರು ಮಳೆಯ ಹಿನ್ನಡೆಯಲ್ಲೂ ರೈತರು ಭೂತಾಯಿಗೆ ಸಡಗರ–ಸಂಭ್ರಮದಿಂದ ವಿಶೇಷ ಪೂಜೆ ಸಲ್ಲಿಸುವುದರೊಂದಿಗೆ ರೈತರು ಸೀಗಿ ಹುಣ್ಣಿಮೆಯನ್ನು ಆಚರಿಸಿದರು.

ಬೆಳಿಗ್ಗೆಯಿಂದಲೇ ಟ್ರ್ಯಾಕ್ಟರ್, ಚಕ್ಕಡಿ ಮೂಲಕ ಜಮೀನುಗಳಿಗೆ ರೈತ ಬಾಂದವರು ತೆರಳಿ ಬನ್ನಿ ಮರಕ್ಕೆ ಹಾಗೂ ಪಾಂಡವರ ಕಲ್ಲಿನ ಮೂರ್ತಿ ಸೃಷ್ಟಿಸಿ ವಿಶೇಷ ಪೂಜೆ ಸಲ್ಲಿಸಿ, ಚರಗ ಚೆಲ್ಲಿದರು. ಪ್ರಸ್ತುತ ವರ್ಷ ಬರದ ಛಾಯೆಯ ನಡುವೆಯೂ ಸಂಪ್ರದಾಯದಂತೆ ಭೂತಾಯಿಗೆ ಉಂಡಿಗಡುಬು, ಪುಂಡಿಪಲ್ಯ, ಕುಚ್ಚಿದ ಮೆಣಸಿನಕಾಯಿ, ಹೋಳಿಗೆ, ಸಂಡಿಗೆ ಹೀಗೆ ವಿವಿಧ ತಿನಿಸುಗಳನ್ನು ಭೂತಾಯಿಗೆ ನೈವೇದ್ಯ ಸಮರ್ಪಿಸಿದರು.



ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾದ ಗದಗ ಜಿಲ್ಲಾ ಯುವ ಘಟಕದ ವತಿಯಿಂದ ಗದಗ ಗ್ರಾಮೀಣ ಪೊಲೀಸ್ ಠಾಣೆಗೆ ನೂತನವಾಗಿ ನೇಮಕಗೊಂಡಿರುವ ಸಿಪಿಐ ಮೆಹಬೂಲಾಲಿ ಎಂ ನದಾಫ್ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಯುವ ಘಟಕದ ಗದಗ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಸಿದ್ದಮ್ಮನಹಳ್ಳಿ, ವಸಂತ್ ಸಿದ್ದಮ್ಮನಹಳ್ಳಿ ಮುಂತಾದವರಿದ್ದರು.

# ಇಂದು ಕಾಂಗ್ರೆಸ್‌ನಿಂದ ವಾಲ್ಮೀಕಿ ಜಯಂತಿ ಆಚರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ–ಬೆಟಗೇರಿ ಶಹರ ಕಾಂಗ್ರೆಸ್ ಸಮಿತಿ ಹಾಗೂ ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ದಿ. 28.10.2023ರಂದು ಶನಿವಾರ ಬೆಳಿಗ್ಗೆ 11.00 ಗಂಟೆಗೆ ಗದಗ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿರುವ ಕಾಂಗ್ರೆಸ ಕಾರ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಡಿ.ಆರ್.ಪಾಟೀಲ ಪಾಲ್ಗೊಳ್ಳಲಿದ್ದಾರೆ. ಹೀಗಾಗಿ ಶಾಸಕರು, ಮಾಜಿ ಶಾಸಕರು, ಪಕ್ಷದ ಜಿಲ್ಲಾ ಮಟ್ಟದ ಪದಾಧಿಕಾರಿಗಳು, ಬ್ಲಾಕ್ ಕಾಂಗ್ರೆಸ್‌ನ ಪದಾಧಿಕಾರಿಗಳು, ಜಿ. ಪಂ, ತಾ. ಪಂ, ಗ್ರಾ. ಪಂ, ಎ.ಪಿ.ಎಂ.ಸಿ ಅಧ್ಯಕ್ಷರು ಹಾಗೂ ಸದಸ್ಯರು, ನಗರಸಭೆ, ಪಟ್ಟಣ ಪಂಚಾಯತಿ, ಪುರಸಭೆ ಅಧ್ಯಕ್ಷರು ಹಾಗೂ ಸದಸ್ಯರು ಸೇರಿದಂತೆ ಪಕ್ಷದ ಎಲ್ಲಾ ಘಟಕದ ಪದಾಧಿಕಾರಿಗಳು ಪಾಲ್ಗೊಳ್ಳಲು ಗದಗ–ಬೆಟಗೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ. ಬಿ. ಅಸೂಟಿ ಹಾಗೂ ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಶೋಕ ಮಂದಾಲಿ ವಿನಂತಿಸಿದ್ದಾರೆ.

# ಶಿವಪ್ರಸಾದಗೌಡ ಪಾಟೀಲರಿಗೆ ಪಿಎಚ್‌ಡಿ

■ ವಿಜಯಸಾಕ್ಷಿ ಸುದ್ದಿ, ಗದಗ

ಶಿವಪ್ರಸಾದಗೌಡ ಹೇಮನಗೌಡ ಪಾಟೀಲ ಇವರು ಕರ್ನಾಟಕ ವಿಶ್ವವಿದ್ಯಾಲಯ, ಭೌತಶಾಸ್ತ್ರ ವಿಭಾಗದಲ್ಲಿ ಇತ್ತೀಚೆಗೆ ನಡೆದ ಮೌಖಿಕ ಪರೀಕ್ಷೆಯಲ್ಲಿ ಪಿಎಚ್‌ಡಿ ಪಡೆದುಕೊಂಡಿದ್ದಾರೆ.



'ಸ್ಪೆಕ್ಟ್ರೋಸ್ಕೂಪಿಕ್ ಸ್ಟಡೀಸ್ ಆನ್ ಬಯೊಲಾಜಿಕಲಿ ಆಕ್ಟಿವ್ ಆರ್ಗ್ಯಾನಿಕ್ ಮೊಲೆಕ್ಯುಲ್ಸ್' ವಿಷಯವಾಗಿ ಮಂಡಿಸಿದ ಪ್ರಬಂಧಕ್ಕೆ ಪಿಎಚ್‌ಡಿ ಲಭಿಸಿದ್ದು, ಡಾ. ಅಶೋಕ ಸಿದರಾಯಿ ಅವರ ಮಾರ್ಗದರ್ಶನದಲ್ಲಿ ಅಧ್ಯಯನ ನಡೆಸಿದ್ದಾರೆ. ಪ್ರೊ. ಟಿ. ಸಂಕರಪ್ಪ ಬಾಹ್ಯ ಪರೀಕ್ಷಕರಾಗಿದ್ದರು. ಇವರು ಪ್ರಸ್ತುತ ಗೋಕಾಕ ಶಿಕ್ಷಣ ಸಂಸ್ಥೆಯ ಜೆಎಸ್‌ಎಸ್ ಪದವಿ ಮಹಾವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ನಿಧನ ವಾರ್ತೆ

### ದಾವಲಬಿ ತಲಾಲಚೂರ



**ಲಕ್ಕುಂಡಿ:** ಇಲ್ಲಿಯ ಶತಾಯುಷಿ ದಾವಲಬಿ ಜಂದೀಸಾಬ ತಲಾಲಚೂರ(102) ಶುಕ್ರವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ.

# ಪತ್ರಕರ್ತ ಹೊನಕೆರೆಗೆ ಇಂದು ಖಾದ್ರಿ ಶಾಮಣ್ಣ ಪ್ರಶಸ್ತಿ ಪ್ರದಾನ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು



ಪತ್ರಿಕೋದ್ಯಮ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಅನುಪಮ ಸೇವೆಗಾಗಿ ನೀಡಲಾಗುವ ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ ಸಮಾರಂಭ ಅ.28ರಂದು ಬೆಳಿಗ್ಗೆ 10.30ಕ್ಕೆ ನಡೆಯಲಿದೆ ಎಂದು ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್ ಪ್ರಕಟಣೆ ತಿಳಿಸಿದೆ.

ಬೆಂಗಳೂರಿನ ಕೆಂಪೇಗೌಡ ರಸ್ತೆಯ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಯ ಸಭಾಂಗಣದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಸಕ್ತ ಸಾಲಿನ ಪ್ರಶಸ್ತಿಗಾಗಿ ಆಯ್ಕೆ ಸಮಿತಿ,ಆಯ್ಕೆ ಮಾಡಿರುವ ಪ್ರಜಾವಾಣಿಯ ಬಳ್ಳಾರಿ ಜಿಲ್ಲೆಯ ಹಿರಿಯ ವಿಶೇಷ ವರದಿಗಾರ ಹೊನಕೆರೆ ನಂಜುಂಡೇಗೌಡ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಯೂ ನಗದು ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ.

ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವ ಎಚ್.ಕೆ.ಪಾಟೀಲ ಅವರು ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆವಹಿಸಿ, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಕರ್ನಾಟಕ ವಾಣಿಜ್ಯ ಮತ್ತುಕೈಗಾರಿಕೆ ಮಹಾಸಂಸ್ಥೆ ಅಧ್ಯಕ್ಷರಮೇಶ್ಚಂದ್ರ ಲಾಹೋಟಿ, ಹಿರಿಯ ಪತ್ರಕರ್ತ ಆರ್.ಪಿ.ಜಗದೀಶ್, ತುಮಕೂರಿನ ಪ್ರಜಾಪ್ರಗತಿ ಪತ್ರಿಕೆಯ ಸಂಪಾದಕ ನಾಗಣ್ಣ ಹಾಗೂ ಹಿರಿಯ ವಕೀಲ ಬಿ.ಟಿ. ವೆಂಕಟೇಶ್ ಸಮಾರಂಭದಲ್ಲಿ ಪಾಲ್ಗೊಳ್ಳಿದ್ದಾರೆ ಎಂದು ಟ್ರಸ್ಟ್ ಪ್ರಕಟಣೆಯಲ್ಲಿ ತಿಳಿಸಿದೆ.

## ಲಿಂ. ಸಿದ್ಧಲಿಂಗ ಶ್ರೀಗಳ 5ನೇ ಪುಣ್ಯಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಶಿವನಗೌಡ ಗೌಡರ ಅಭಿಮತ

# ಡಾ. ತೋಂಟದ ಸಿದ್ಧಲಿಂಗ ಶ್ರೀಗಳು ತ್ರಿಕಾಲಜ್ಞಾನಿಗಳು

■ ವಿಜಯಸಾಕ್ಷಿ ಸುದ್ದಿ, ಗದಗ

ಭೂತ, ವರ್ತಮಾನ, ಭವಿಷ್ಯತ್ ಕಾಲಗಳ ವಿಷಯ ಬಲ್ಲವರನ್ನು ತ್ರಿಕಾಲ ಜ್ಞಾನಿಗಳು ಎಂದು ನಾವೆಲ್ಲ ಭಾವಿಸುತ್ತೇವೆ. ಈ ನಿಟ್ಟಿನಲ್ಲಿ ಪೂಜ್ಯ ಲಿಂಗೈಕ್ಯ ಡಾ. ತೋಂಟದ ಸಿದ್ಧಲಿಂಗ ಶ್ರೀಗಳು ತ್ರಿಕಾಲಜ್ಞಾನಿಗಳಾಗಿದ್ದರು ಎಂಬುದಕ್ಕೆ ಅವರ ನಡೆ, ನುಡಿ, ಸಮಾಜಮುಖಿ ಕಾರ್ಯಗಳು ಉತ್ಕೃಷ್ಟ ನಿದರ್ಶನಗಳಾಗಿವೆ ಎಂದು ನಿವೃತ್ತ ಮುಖ್ಯೋಪಾಧ್ಯಾಯ ಶಿವನಗೌಡ ಗೌಡರ ಅಭಿಪ್ರಾಯಪಟ್ಟರು.

ಸ್ಥಳೀಯ ಎಸ್‌ವಾಯ್‌ಬಿಎಂಎಸ್ ಯೋಗ ಪಾಠಶಾಲೆಯ ಬಸವ ಯೋಗ ಕೇಂದ್ರ ಮತ್ತು ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರ ಗದಗ ಇವರುಗಳ ಸಹಯೋಗದಲ್ಲಿ ಸಿದ್ಧಲಿಂಗ ನಗರದಲ್ಲಿನ ಬಸವಯೋಗ ಮಂದಿರದಲ್ಲಿ ನಡೆದ ಲಿಂ. ಸಿದ್ಧಲಿಂಗ ಶ್ರೀಗಳ 5ನೇ ಪುಣ್ಯಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡುತ್ತಿದ್ದರು.



ಶ್ರೀಗಳು ಶ್ರೀಮಠದ ಪೀಠಾಧಿಕಾರ ವಹಿಸಿಕೊಂಡಾಗ ಶ್ರೀಮಠ ಸಾಮಾಜಿಕ, ಆರ್ಥಿಕ, ಧಾರ್ಮಿಕವಾಗಿ ಅಷ್ಟೊಂದು ಸಬಲವಾಗಿರಲಿಲ್ಲ. ಇದನ್ನರಿತ ಶ್ರೀಗಳು 'ಮಠ ಸ್ವಾಮಿಗಳದಾಗಬಾರದು, ಅದು ಭಕ್ತರದಾಗಬೇಕು' ಎಂದು ಶಿವಾನುಭವ ಕಾರ್ಯಕ್ರಮ ಮೂಲಕ ಜನ ಸಂಘಟನೆ ಮಾಡಿದರು. ಸಮಾಜದಲ್ಲಿರುವ ಜಾತಿ, ಮತ, ಪಂಥಗಳ ಜಂಜಾಟ ನಿವಾರಣೆಗಾಗಿ ಶ್ರೀಮಠದಲ್ಲಿದ್ದ 'ಲಿಂಗಾಯತರಿಗೆ ಮಾತ್ರ ಪ್ರವೇಶ' ಎಂಬ ಸೂಚನಾ ಫಲಕ ತೆಗೆಸಿದರು. ವಿವಿಧ ಜಾತಿ ಜನಾಂಗದವರನ್ನು ಮಠದ ಜಾತ್ರೆಯ ಅಧ್ಯಕ್ಷರನ್ನಾಗಿ ಮಾಡಿದರು.

ಈ ನಾಡಿನ ಭಾಷೆ, ನೆಲ, ಜಲ, ಪರಿಸರ ಉಳಿವಿಗಾಗಿ ಸ್ವತಃ ಗೋಕಾಕ ಚಳುವಳಿ, ಕಪ್ಪತ್ತಗುಡ್ಡ ಸಂರಕ್ಷಣೆಗೆ ಮುಂತಾದಳತ್ವ ವಹಿಸಿ ಹೋರಾಟ ಮಾಡಿದರು. ಇವೆಲ್ಲ ವಿಷಯಗಳು ಪೂಜ್ಯ ಲಿಂಗೈಕ್ಯ ಡಾ. ತೋಂಟದ ಸಿದ್ಧಲಿಂಗ ಶ್ರೀಗಳು ತ್ರಿಕಾಲಜ್ಞಾನಿಗಳು ಎಂಬುದಕ್ಕೆ ಸಾಕ್ಷಿ ಸ್ವರೂಪಗಳಾಗಿವೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಎಸ್.ಎಸ್ ಪಾಟೀಲ (ಅರಹುಣಸಿ) ಮಾತನಾಡಿ, ಸಿದ್ಧಲಿಂಗ ಶ್ರೀಗಳು ಸ್ವತಃ ರೈತರಾಗಿ ಕೃಷಿ ಅಭಿವೃದ್ಧಿಗಾಗಿ ಡಂಬಳದಲ್ಲಿ ಮಾಡಿದ ವಿನೂತನ ಕೃಷಿ ಕಾರ್ಯಗಳು ಅನೇಕ ರೈತರಿಗೆ ಪ್ರೇರಣೆಯಾಗಿವೆ ಎಂದರು. ಸಿದ್ಧಲಿಂಗ ಶ್ರೀಗಳ ಕುರಿತು ಸಹನಾ ಗೌಡರ ರಚಿಸಿದ ಕವನವನ್ನು ವೀಣಾ ಗೌಡರ ವಾಚನ ಮಾಡಿದರು. ನಿವೃತ್ತ ಶಿಕ್ಷಕಿ ಶಾಂತಾ ಕುಂದಗೋಳ ಮಾತನಾಡಿದರು.

ವೇದಿಕೆಯಲ್ಲಿ ಲಿಂಗಾಯತ ಪ್ರಗತಿಶೀಲ ಸಂಘದ ಆಧ್ಯಕ್ಷ ಶೇಖರಪ್ಪ ಕಳಸಾಪೂರಶೆಟ್ರ, ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರದ ಉಪಾಧ್ಯಕ್ಷೆ ವಿಜಯಲಕ್ಷ್ಮೀ ಆನೆಹೊಸೂರು, ಹಿರಿಯರಾದ ಡಾ. ಎಸ್.ಕೆ ನಾಲವತ್ವಾಡಮಠ ಉಪಸ್ಥಿತರಿದ್ದರು. ವೀರಣ್ಣ ಗೋಟಡಕಿ, ಎಸ್.ಬಿ ಮೆಣಸಗಿ, ವಿಜಯಾ ಚನ್ನಶೆಟ್ಟಿ, ಸೌಮ್ಯ ಶೆಟ್ಟರ, ಸುನಂದಾ ಅರಹುಣಸಿ, ಗಿರಿಜಾ ಅಂಗಡಿ, ಗೌರಿ ಜಿರಂಕಳಿ, ವಿಯಜಲಕ್ಷ್ಮೀ ಮೇಕಳಿ ಮತ್ತು ಯೋಗಪಾಠಶಾಲೆಯ ನಿತ್ಯ ಯೋಗಸಾಧಕರು, ಸದಸ್ಯರು ಪಾಲ್ಗೊಂಡಿದ್ದರು. ಗಿರಿಜಾ ನಾಲತ್ವಾಡಮಠ ಪ್ರಾರ್ಥಿಸಿದರು. ಬಸವ ಯೋಗ ಕೇಂದ್ರದ ಪ್ರಾಚಾರ್ಯ ಕೆ.ಎಸ್ ಪಲ್ಲೇದ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವಿ.ಎಂ ಮುಂದಿನಮನಿ ವಂದಿಸಿದರು. ಬಸವರಾಜ ತೋಟಗೇರ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಿ.ಸಿ ಪಾವಟೆ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಎಸ್.ಪಿ ಗೌಳಿ ಮಾತನಾಡಿ, ಪೂಜ್ಯ ಡಾ. ತೋಂಟದ ಸಿದ್ಧಲಿಂಗ ಶ್ರೀಗಳು ತಿಳಿಸಿರುವ ವೈಜ್ಞಾನಿಕ, ವೈಚಾರಿಕ ವಿಚಾರಗಳನ್ನು ನಮ್ಮ ನಿತ್ಯದ ಬದುಕಿನಲ್ಲಿ ಅಳವಡಿಸಿಕೊಂಡು ನಡೆದಿದ್ದಾದರೆ ನಮ್ಮ ಜೀವನ ಸಾರ್ಥಕವಾಗುವದಲ್ಲದೆ, ಸುಸಂಸ್ಕೃತ ಸಮಾಜ ನಿರ್ಮಾಣಗೊಳ್ಳಲು ಸಾಧ್ಯವಾಗುವದೆಂದು ಹೇಳಿದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka